ಐಕ್ಯರಂಗ

(ವಾರ ಪತ್ರಿಕೆ)

ಭಾರತಕಮ್ಯೂನಿಸ್ಟ್‌ಪಕ್ಷ[ಮಾರ್ಕ್ಸ್‌ವಾದಿ]ಕರ್ನಾಟಕರಾಜ್ಯ ಸಮಿತಿಯ ಮುಖಪತ್ರಿಕೆ

ಸಂಪುಟ 5 ಸಂಚಿಕೆ 33 ಆಗಸ್ಟ್ 14, 1983 ಬೆಲೆ 60 ಪೈಸೆ

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ :

ಬೆಲೆಯೇರಿಕೆ ವಿರುದ್ಧ ಸತ್ಯಾಗ್ರಹ ಸಹಸ್ರಾರು ಜನರ ಬಂಧನ

ಬೆಲೆಯೇರಿಕೆಯ ಪೆಡಂಭೂತ ಇಡೀ ರಾಜ್ಯದ ಜನಕೋಟಿಯನ್ನೆದುರಿಸುತ್ತಿದೆ. ಕರ್ನಾಟಕ ರಾಜ್ಯದಲ್ಲಿ ಸರಕಾರ ಬದಲಾವಣೆಯಾದರೂ ಕೂಡ ಕೇಂದ್ರದಲ್ಲಿ ಕಾಂಗ್ರೆಸ್ ಸರಕಾರವೇ ಇರುವುದರಿಂದ ಅದರ ಆರ್ಥಿಕ ನೀತಿಯ ಪರಿಣಾಮವಾಗಿ ಅತ್ಯಾವಶ್ಯಕ ವಸ್ತುಗಳ ಬೆಲೆ ಒಂದೇ ಸಮನೆ ಹೆಚ್ಚಾಗುತ್ತಿದ್ದು ಜನಜೀವನವನ್ನೇ ಅತ್ಯಂತ ಕಠಿಣ ಪರಿಸ್ಥಿತಿಗೆ ದೂಡಿದೆ.

ಬಂಡವಾಳಶಾಹಿ ರಾಜಕೀಯ-ಆರ್ಥಿಕ ನೀತಿ ಬದಲಾಗದೆ ಬೆಲೆಯೇರಿಕೆಯಂಥ ಸಮಸ್ಯೆಗಳನ್ನು ಪೂರ್ಣವಾಗಿ ಬದಲಾಯಿಸಲು ಸಾಧ್ಯವಿಲ್ಲೆಂಬುದು ನಿಜ. ಆದರೆ ಈಗಿರುವ ಬಂಡವಾಳಶಾಹಿ ಪದ್ಧತಿಯಲ್ಲಿಯೇ ಕಾಂಗ್ರೆಸ್‌ಗೆ ವಿರೋಧವಾಗಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಾರ್ಟಿಯ ಮುಖಂಡತ್ವದಲ್ಲಿ ಎಡರಂಗ ರಚಿಸಿ ಅಧಿಕಾರದ ಚುಕ್ಕಾಣಿ ಹಿಡಿದದ್ದಾದರೆ ಜನರಿಗೆ ಕೆಲವು ಮಟ್ಟಿಗಾದರೂ ಪರಿಹಾರ ಒದಗಿಸಬಹುದೆಂಬ ವಾಸ್ತವಿಕ ಸಂಗತಿ ಪಶ್ಚಿಮ ಬಂಗಾಲ, ತ್ರಿಪುರ, ಎಡರಂಗ ಕೇರಳದ ಎಡ ಪ್ರಜಾಪ್ರಭುತ್ವರಂಗದ ಸರಕಾರಗಳು ತೋರಿಸಿಕೊಟ್ಟಿವೆ.

ಬಂಡವಾಳ ಶಾಹಿ ಪ್ರಭುತ್ವವನ್ನ ಕಿತ್ತೊಗೆದು ಜನತಾ ಪ್ರಜಾಪ್ರಭುತ್ವ ರಂಗದ ಸರಕಾರ ರಚಿಸುವುದು ತುರ್ತಿನಲ್ಲಾಗತಕ್ಕ ಸಾಧನೆಯಲ್ಲ. ಆದಕ್ಕೆ ಪೂರ್ವಭಾವಿಯಾಗಿ ಇಂದಿನ ಪರಿಸ್ಥಿತಿಯಲ್ಲಿ / ಎಡ ಪ್ರಜಾಪ್ರಭುತ್ವರಂಗ ರಚಿಸಲು, ಬಂಡವಾಳಶಾಹಿ ಆಡಳಿತೆಯ ವಿಫಲತೆಯನ್ನು ಜನರಿಗೆ ಮನದಟ್ಟು ಮಾಡಿಕೊಡಲು ಸಂಘಟಿತ ರೈತ-ಕಾರ್ಮಿಕ ವರ್ಗ ಹಾಗೆಯೇ ಸಾರ್ವಜನಿಕರನ್ನು ತಮ್ಮ ಆರ್ಥಿಕ ಬೇಡಿಕೆಗಾಗಿ ನಡೆಸುತ್ತಿರುವ ಚಳುವಳಿಯ ಜೊತೆಯಲ್ಲೇ ರಾಜಕೀಯ ಹೋರಾಟಗಳಲ್ಲಿಯೂ ಪಾಲ್ಗೊಳ್ಳುವಂತೆ ಮಾಡುವ ಅಗತ್ಯವನ್ನು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಾರ್ಟಿ ಒತ್ತಿ ಹೇಳುತ್ತ ಬಂದಿದೆ. ಸಮಗ್ರ ಜನತೆ ರಾಜಕೀಯ ಹೋರಾಟಗಳಲ್ಲಿ ಭಾಗವಹಿಸುವ ಆಸ್ತೆ ತೋರಿಸದಿದ್ದರೆ ಬಂಡವಾಳಶಾಹಿ ಪ್ರಭುತ್ವವನ್ನು ಬದಲಾಯಿಸುವ ಕಾರ್ಯ ನಿಧಾನಗೊಳ್ಳುತ್ತದೆ.

ಈ ದಿಸೆಯಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಾರ್ಟಿ ರಾಜ್ಯ ಸಮಿತಿಯ ಬೆಲೆಯೇರಿಕೆ ವಿರೋಧ ದಿನಾಚರಣೆಯನ್ನು ಸಮಗ್ರ ಜನತೆಯ ಹೋರಾಟವನ್ನಾಗಿ ಪ್ರಭಾವಶಾಲಿಯಾಗಿ ನಡೆಸಿರುವುದು ಅಭಿನಂದನೀಯವಾಗಿದೆ. ಜನತೆ ಎದುರಿಸುತ್ತಿರುವ ಬೆಲೆಯೇರಿಕೆಯಂತಹ ಸಮಸ್ಯೆಗಳಿಗೆ ಪರಿಹಾರ ಬರೇ ಮೆರವಣಿಗೆ, ಮನವಿ ಅರ್ಪಣೆಗಳಿಂದ ಸಾಧ್ಯವಿಲ್ಲೆಂದು ಮನಗಂಡು ಬೆಲೆಯೇರಿಕೆಗೆ ಕಾರಣೀಭೂತರಾರು, ಅದನ್ನು ಯಾವ ರೀತಿ ಬಗೆಹರಿಸಬಹುದು ಎಂಬೆಲ್ಲ ವಿಷಯಗಳ ಕುರಿತು ಜನತೆಯಲ್ಲಿ ತಿಳುವಳಿಕೆ-ಜಾಗೃತಿಯನ್ನುಂಟು ಮಾಡುವ ಮಹಾ ಕಾರ್ಯವನ್ನು ದ. ಕ. ಜಿಲ್ಲೆಯ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಾರ್ಟಿ ಕೈಗೊಂಡಿದೆ. ತಾ॥ 10-11 ರಂದು ತಾಲ್ಲೂಕು, ಜಿಲ್ಲಾ ಮಟ್ಟದಲ್ಲಿ ಸಾಮೂಹಿಕ ಸತ್ಯಾಗ್ರಹ ಮಾಡುವ ನಿರ್ಣಯ ಕೈಗೊಂಡು ಅದರ ಯಶಸ್ಸಿಗಾಗಿ ಪ್ರಭಾವಿತವಾದ ಪ್ರಚಾರ-ಪ್ರಕ್ಷೋಭೆ ನಡೆಸಿತು. ಒಂದು ತಿಂಗಳಿಂದಲೂ ಹಳ್ಳಿ ಮತ್ತು ಪೇಟೆಗಳಲ್ಲಿ ಪೋಸ್ಟರ, ಕರಪತ್ರ, ಸಭೆ, ಪ್ರಚಾರಗಳ ಮೂಲಕ ಬೆಲೆಯೇರಿಕೆಯ ಒಳಗುಟ್ಟನ್ನು ಜನರಿಗೆ ತಿಳಿಯಪಡಿಸಲಾಯಿತು. ಸತ್ಯಾಗ್ರಹಿಗಳನ್ನು ತಯಾರಿಸಲಾಯಿತು. ತಮ್ಮ ಸ್ವಂತದ ಸಂಬಳ ತುಟ್ಟಿ ಭತ್ತೆ ಹೆಚ್ಚಳದ ಹೋರಾಟವಲ್ಲ, ಇಡೀ ಜನ ಸಮೂಹವನ್ನೇ ಎದುರಿಸುತ್ತಿರುವ ಸಮಸ್ಯೆಯ ಸಲುವಾಗಿ ಸತ್ಯಾಗ್ರಹ ಹೂಡಲು ಮುಂದೆ ಬರುವಂತೆ, ಹೊಸ ಜಾಗೃತಿಯಿಂದ ಚಳುವಳಿಯಲ್ಲಿ ಭಾಗವಹಿಸಲು ಮುಂದೆ ಬಂದಿರುವುದು ನಿಜವಾಗಿಯೂ ಹೆಮ್ಮೆಯ ವಿಷಯ.

ಗಮನಿಸಿ

ಸಿ. ಪಿ. ಐ. (ಎಂ.) ಶಾಸಕರಾದ ಕಾಂ। ಪಿ. ರಾಮಚಂದ್ರ ರಾವ್ ಮತ್ತು ಕಾಂ। ಎಸ್. ಸೂರ್ಯನಾರಾಯಣ ರಾವ್ ಅವರು 8ನೆಯ ಕೇಂದ್ರ ಹಣಕಾಸು ಸಮಿತಿಗೆ ದಿ 11-8-83 ರಂದು ಮನವಿಯನ್ನು ಅರ್ಪಿಸಿದ್ದು ಅದರ ಪೂರ್ಣ ಪಾಠವನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು.

ಬಿಜೆಪಿಯವರು ಕಳ್ಳ ಸಾಗಾಣಿಕೆದಾರರ ಅಕ್ಕಿಯನ್ನು ಕೇರಳ ಗಡಿಯಲ್ಲಿ ಹಿಡಿದು ಅಕ್ಕಿ ಮಾರುವ ನಾಟಕ ಮಾಡಿದ್ದರು. ಆದರೆ ದ.ಕ. ಜಿಲ್ಲೆಯ ರೈತ-ಕಾರ್ಮಿಕರು ಸಿ.ಪಿ.ಐ (ಎಂ) ನೇತೃತ್ವದಲ್ಲಿ ಸಂಘಟಿತ ಹೋರಾಟವೇ ಅಂಥ ಹೋರಾಟಗಳಲ್ಲಿ ಸಾರ್ವಜನಿಕರು ಸಕ್ರಿಯವಾಗಿ ಪಾಲ್ಗೊಳ್ಳುವುದೇ ಅತ್ಯಗತ್ಯ ಎಂದು ಮನಗಂಡು ಸಾವಿರಾರು ಜನರನ್ನ ಜೈಲಿಗೆ ಕಳುಹಿಸುವ ಕಾರ್ಯಕ್ರಮ ಯಶಸ್ವಿಗೊಳಿಸಿರುವುದು ದ.ಕ. ಜಿಲ್ಲೆಯ ರಾಜಕೀಯದಲ್ಲಿ ಹೊಸ ಬದಲಾವಣೆ ಉಂಟು ಮಾಡುವುದರಲ್ಲಿ ಸಂಶಯವಿಲ್ಲ.

ಗ್ರಾಮ-ಪಟ್ಟಣಗಳ ನಡುವೆ ಅಂತರವಿಲ್ಲದೆ ಆಹಾರ ಧಾನ್ಯ, ಬಟ್ಟೆ, ಮುಂತಾದ ಅವಶ್ಯಕ ಸಾಮಗ್ರಿಗಳನ್ನು ಕಡಿಮೆ ದರದಲ್ಲಿ ಅಗ್ಗದಿಂದ ಅಂಗಡಿಗಳ ಮೂಲಕ ವಿತರಣೆ ಮಾಡಬೇಕು ಗೊಬ್ಬರ ಮುಂತಾದ ಕೃಷಿ ಸಂಬಂಧ ಉಪಕರಣಗಳನ್ನು ರೈತರಿಗೆ ನ್ಯಾಯ ಬೆಲೆಯಲ್ಲಿ ಒದಗಿಸಬೇಕು, ಆಹಾರ ಧಾನ್ಯದ ಸಗಟು ವ್ಯಾಪಾರವನ್ನು ಸರಕಾರವೇ ವಹಿಸಿಕೊಳ್ಳಬೇಕು. ದ.ಕ. ಜಿಲ್ಲೆಗೆ ಹೆಚ್ಚು ಆಹಾರಧಾನ್ಯ ಸರಬ

(8ನೇ ಪುಟ ನೋಡಿ)

ಸಂಪಾದಕೀಯ :

ಸ್ವಾತಂತ್ರ್ಯ ದಿನಾಚರಣೆ

ನಮ್ಮ ದೇಶ ಸ್ವಾತಂತ್ರ್ಯ ಪಡೆದು ಮೂವತ್ತಾರು ವರ್ಷವಾಯಿತು. ಪ್ರಧಾನ ಮಂತ್ರಿ ಇಂದಿರಾ ಗಾಂಧಿಯವರು ಆಗಸ್ಟ್ 15ರಂದು ದಿಲ್ಲಿ ಕೆಂಪು ಕೋಟೆ ಮೇಲೆ ರಾಷ್ಟ್ರಧ್ವಜವನ್ನು ಏರಿಸಿ ಜನರನ್ನುದ್ದೇಶಿಸಿ ಭಾಷಣ ಮಾಡಲಿದ್ದಾರೆ. ತಮ್ಮ ಭಾಷಣದಲ್ಲಿ ವಿರೋಧ ಪಕ್ಷಗಳನ್ನು ಹಳಿಯುವ, ರಾಷ್ಟ್ರದ ಸಮಗ್ರತೆಯನ್ನು ಕಾಪಾಡುವ, 20 ಅಂಶಗಳ ಕಾರ್ಯಕ್ರಮವನ್ನು ಯಶಸ್ವಿಗೊಳಿಸುವ ವಿಷಯಗಳಿಗೆ ಪ್ರಾಧಾನ್ಯತೆ ಕೊಡಬಹುದು.

ಈ ವರ್ಷ ಸ್ವಾತಂತ್ರ್ಯ ದಿನಾಚರಣೆ ಆಚರಿಸುವಾಗ ಹೋದ ವರ್ಷಕ್ಕಿಂತ ಈ ವರ್ಷ ದೇಶದ ರಾಜಕೀಯ, ಆರ್ಥಿಕ ಪರಿಸ್ಥಿತಿ ಹದಗೆಟ್ಟಿರುವುದನ್ನು ನೋಡುತ್ತಿದ್ದೇವೆ. ಆಳುವ ಪಕ್ಷದೊಳಗೆ ಆಂತರಿಕ ತಿಕ್ಕಾಟ ಹೆಚ್ಚಾಗಿ ಮಹಾರಾಷ್ಟ್ರ, ಬಿಹಾರಗಳಲ್ಲಿ ಮುಖ್ಯಮಂತ್ರಿಗಳ ಪದಚ್ಯುತಿಯಾಗಿದೆ. ಇನ್ನೂ ಕೆಲವು ರಾಷ್ಟ್ರಗಳ ಮುಖ್ಯಮಂತ್ರಿಗಳು ಸ್ಥಾನ ಕಳೆದುಕೊಳ್ಳುವ ಸಂಭವ ಇಲ್ಲದಿಲ್ಲ. ಹೋದವರ್ಷ ಕೊನೆಯೊಳಗಾಗಿಯೇ ತನ್ನ ಪಕ್ಷದ ಚುನಾವಣೆ ನಡೆಸಲಾಗುವುದೆಂದು ಸಾರಿದ್ದರೂ ಕೂಡ, ಇಂದಿಗೂ ಇಂದಿರಾಗಾಂಧಿಯ ಸರ್ವಾಧಿಕಾರವೇ ಮುಂದುವರಿದಿದೆ. ಪಕ್ಷದ ಚುನಾವಣೆ ಮೂಲೆ ಗುಂಪಾಗಿದೆ. ಹೀಗಾಗಿ ದೇಶ ಎದುರಿಸುತ್ತಿರುವ ಸಮಸ್ಯೆಗಳಿಗೆ ಸಮರ್ಪಕ ಪರಿಹಾರ ಒದಗಿಸುವುದರಲ್ಲಿ ಇಂದಿರಾಗಾಂಧಿ ವಿಫಲರಾಗಿದ್ದಾರೆ.

ಹೋದ ವರ್ಷ ಸ್ವಾತಂತ್ರ್ಯ ದಿನಾಚರಣೆಯನ್ನಾಚರಿಸುತ್ತಿದ್ದಾಗ ಅಸ್ಸಾಂ ಸಮಸ್ಯೆಯಷ್ಟೇ ಇತ್ತು. ಈಗ ಪಂಜಾಬ್ ಪ್ರಶ್ನೆಯೂ ಸೇರಿಕೊಂಡಿದೆ. ಅಸ್ಸಾಂ, ಪಂಜಾಬ್‌ನಲ್ಲಷ್ಟೇ ಅಲ್ಲ ಛಿದ್ರಕಾರಿ ಶಕ್ತಿಗಳು ದೇಶದ ಇತರ ಭಾಗಗಳಲ್ಲಿ ಕೂಡ ತಮ್ಮ ಕೈ ಚಾಚಿದೆ. ಅಮೇರಿಕಾದ ಸಾಮ್ರಾಜ್ಯಶಾಹಿಗಳ ಪ್ರಚೋದನೆಯಿಂದಲೇ ಈ ಛಿದ್ರಕಾರಿ ಶಕ್ತಿಗಳು ದೇಶದ ಸಾರ್ವಭೌಮತ್ವಕ್ಕೇನೇ ಗಂಡಾಂತರಕಾರಿಯಾದ ಚಟುವಟಿಕೆಗಳಲ್ಲಿ ತೊಡಗಿದ್ದಾರೆಂದು ತಿಳಿದೂ ಇಂದಿರಾಗಾಂಧಿಯವರು ಅಂಥ ಶಕ್ತಿಗಳ ವಿರುದ್ಧ ಹೋರಾಡಲು ಇಡೀ ದೇಶದ ಜನರನ್ನು, ಎಡ ಮತ್ತು ಪ್ರಜಾಪ್ರಭುತ್ವವಾದಿ ಪಕ್ಷ ಹಾಗೂ ಶಕ್ತಿಗಳನ್ನು ವಿಶ್ವಾಸಕ್ಕೆ ತೆಗೆದುಕೊಳ್ಳುತ್ತಿಲ್ಲ. ತಮ್ಮ ಜೀವನದ ಹಂಗು ತೊರೆದು ಅಂಥ ಶಕ್ತಿಗಳ ವಿರುದ್ಧ ಹೋರಾಡುತ್ತಿರುವ, ಅಂಥ ಹೋರಾಟದಲ್ಲಿ ನೂರಾರು ಪಾರ್ಟಿ ಕಾರ್ಯಕರ್ತರನ್ನು ಕಳೆದುಕೊಂಡ ಸಿ. ಪಿ. ಐ. (ಎಂ.) ನಂಥ ಪಕ್ಷ ಹಾಗೂ ಇತರ ರಾಜಕೀಯ ಪಕ್ಷಗಳ ಮೇಲೆ ಇಂದಿರಾ ಗಾಂಧಿ ಸುಳ್ಳು ಆರೋಪ ಹೊರಿಸುತ್ತಿರುವುದು ಅವರ ತಪ್ಪು ಧೋರಣೆಯನ್ನು ಮುಚ್ಚಿಕೊಳ್ಳಲು ಮಾಡುವ ಪ್ರಯತ್ನವಾಗಿದೆ.

ಅಸ್ಸಾಂ, ಪಂಜಾಬ್ ಸಮಸ್ಯೆಗಳನ್ನು ಬಗೆಹರಿಸಲು ಅಸಮರ್ಥರಾದ ಇಂದಿರಾಗಾಂಧಿ ರಾಜಕೀಯವಾಗಿ ಮತ್ತೊಂದು ದೊಡ್ಡ ಸೋಲನ್ನೆದುರಿಸಬೇಕಾಯಿತು. ಆಂಧ್ರ, ಕರ್ನಾಟಕ, ಕಾಶ್ಮೀರಗಳಲ್ಲಿ ಅಧಿಕಾರ ಕಳೆದುಕೊಳ್ಳಬೇಕಾಯಿತು. ಇದು ಕೇಂದ್ರರಾಜ್ಯ ಸಂಬಂಧ, ರಾಜ್ಯಗಳಿಗೆ ಹಣಕಾಸು ಸಹಾಯ, ರಾಜ್ಯ ಗವರ್ನರುಗಳ ಪಾತ್ರ ಮುಂತಾದ ಸಮಸ್ಯೆಗಳಿಗೆ ಮಹತ್ವ ಕೊಟ್ಟಿದೆ. ಆಂಧ್ರ, ಕರ್ನಾಟಕ, ಪ. ಬಂಗಾಲ, ಕಾಶ್ಮೀರ, ತಮಿಳುನಾಡು ಮೊದಲಾದ ವಿರೋಧ ಪಕ್ಷಗಳ 'ರಾಜ್ಯ ಸರ್ಕಾರಗಳು ಒಟ್ಟಾಗಿ ಕೇಂದ್ರ - ರಾಜ್ಯ ಸಂಬಂಧದ ಪ್ರಶ್ನೆಯು ಪುನರ್ವಿಮರ್ಶೆಯಾಗಬೇಕೆಂದು ಒತ್ತಾಯ ತಂದಿರುವುದರ ಪರಿಣಾಮವಾಗಿ ಕೇಂದ್ರ ಸರ್ಕಾರ ಸರ್ಕಾರಿಯಾ ಕಮಿಟಿಯನ್ನು ನೇಮಿಸಬೇಕಾಗಿ ಬಂದಿದೆ. ಹಾಗೆಯೇ ರಾಜ್ಯ - ಕೇಂದ್ರಗಳ ಆರ್ಥಿಕ ಸಂಪನ್ಮೂಲ, ರಾಜ್ಯಗಳಿಗೆ ಕೇಂದ್ರದಿಂದ ಸಲ್ಲತಕ್ಕ ಆರ್ಥಿಕ ಸಹಾಯಗಳ ಕುರಿತು ವರದಿ ಮಾಡಲು ಆರ್ಥಿಕ ಕಮೀಶನನ್ನು ರಚಿಸಲಾಗಿದೆ.

ಕಳೆದೊಂದು ವರ್ಷದಲ್ಲಿ ಆರ್ಥಿಕ ಮುಗ್ಗಟ್ಟು ಗಂಭೀರಗೊಂಡಿದೆ. ಅಂತರರಾಷ್ಟ್ರೀಯ ಹಣಕಾಸು ಸಂಸ್ಥೆಯಿಂದ ಕೋಟ್ಯಾವಧಿ ರೂಪಾಯಿ ಸಾಲಪಡೆಯುವಾಗ ಒಪ್ಪಿಕೊಂಡ ಕರಾರುಗಳಿಂದಾಗಿ ಅತ್ಯಾವಶ್ಯಕ ವಸ್ತುಗಳ ಬೆಲೆ ಹೆಚ್ಚಾಗುತ್ತಲೇ ಇದೆ. ಬೆಳೆ ಉತ್ಪತ್ತನದ ಖರ್ಚು ಜಾಸ್ತಿಯಾಗಿ ರೈತರು ನ್ಯಾಯ ಬೆಲೆಗಾಗಿ ತೀವ್ರ ಹೋರಾಟ ಮುಂದುವರಿಸಬೇಕಾಗಿದೆ. ಕೊರತೆ ಮುಂಗಡ ಪತ್ರಗಳ ಕಾರಣದಿಂದಾಗಿ ಅತಿಪ್ರಸರಣ ಎಲ್ಲೆ ಮೀರಿ ಅತ್ಯಾವಶ್ಯ ವಸ್ತುಗಳ ಬೆಲೆ ಗಗನಕ್ಕೇರುತ್ತಲೇ ಇದೆ. ಇದರಿಂದಾಗಿ ಸರ್ವೇಸಾಮಾನ್ಯ ಜನರೆಲ್ಲ ಹೇಳತೀರದ ಸಂಕಷ್ಟಗಳನ್ನೆದುರಿಸಬೇಕಾಗಿ ಬಂದಿದೆ.

ಆಮದು - ರಫ್ತು ಕ್ರಮ, ಬಂಡವಾಳಶಾಹಿ ಆರ್ಥಿಕ ನೀತಿ, ಲಾಭಬಡಕರಿಗೆ ಪ್ರೋತ್ಸಾಹ ಮೊದಲಾದ ಆರ್ಥಿಕ ನೀತಿ ಕೈಗಾರಿಕೆಯಲ್ಲಿಯೂ ಬಿಕ್ಕಟ್ಟನ್ನುಂಟುಮಾಡಿದೆ. ಹಲವಾರು ಕಾರ್ಖಾನೆಗಳು

(8ನೇ ಪುಟ ನೋಡಿ)

ಸ್ವಾತಂತ್ರ್ಯ ದಿನಾಚರಣೆ :

ಕೃಷಿ ಕಾರ್ಮಿಕರ ದಾರುಣ ಪರಿಸ್ಥಿತಿ

ಸ್ವಾತಂತ್ರ್ಯ ಪಡೆದು ಮೂವತ್ತೇಳನೆಯ ವರ್ಷದಲ್ಲಿದ್ದೇವೆ. ಗ್ರಾಮಾಂತರ ಪ್ರದೇಶದಲ್ಲಿ ಬಡತನ ಬೇರೂರಿನಿಂತಿದೆ. ಇದರಿಂದಾಗಿ ಅಸಮಾಧಾನ ವಿಶಾಲವಾಗಿ ಬೆಳೆಯುತ್ತಿದೆ. ಕಾರಣವೇನೆಂದರೆ ನಾನಾ ತರದ ಸುಲಿಗೆಗೆ ತುತ್ತಾಗಿರುವ ಕೃಷಿ ಕಾರ್ಮಿಕರ ಹೀನ ಪರಿಸ್ಥಿತಿ.

ಹೆಚ್ಚಿನ ಕೃಷಿ ಕಾರ್ಮಿಕರಿಗೆ ಭೂಮಿ ಇಲ್ಲ. ಕೆಲವರಿಗೆ ಸ್ವಲ್ಪ ಹಿಡುವಳಿಯಿದ್ದರೂ ಕೂಡ, ಅದರಿಂದಲೇ ಅವರ ಉಪಜೀವನ ಸಾಗುವುದಿಲ್ಲ. ಜೀವನೋಪಾಯಕ್ಕಾಗಿ ಕೂಲಿ ಕೆಲಸ ಮಾಡಬೇಕಾಗುತ್ತದೆ. ಕೃಷಿ ಕಾರ್ಮಿಕರ ಸಲುವಾಗಿ ಕನಿಷ್ಟ ಕೂಲಿ ಶಾಸನ ಜಾರಿಯಲ್ಲಿದೆ. ಆದರೆ ಅದು ಅನುಷ್ಠಾನದ ಬೆಳಕು ಕಂಡಿಲ್ಲ. ಹೆಚ್ಚಿನ ಪ್ರದೇಶದಲ್ಲಿ ಇವರಿಗೆ ಸಿಗುವ ಕೂಲಿ ಬರೇ ಒಂದು ಕಿಲೋ ಧಾನ್ಯದಷ್ಟು. ಮುದುಕರೂ – ಮಕ್ಕಳೆಲ್ಲರೂ ಕೃಷಿ ಕೂಲಿಗಾರರೇ. ವರ್ಷದಲ್ಲಿ ನೂರರಿಂದ ನೂರೈವತ್ತು ದಿವಸಗಳಷ್ಟೆ ಇವರಿಗೆ ಉದ್ಯೋಗ. ಇತರ ದಿವಸಗಳಲ್ಲಿ ಅರೆ ಹೊಟ್ಟೆಯಲ್ಲೇ ಉಪಜೀವನ.

ಕೃಷಿ ಕೂಲಿಗಾರರ ಜೀವನ ಮಟ್ಟವು ಅವರಿಗೆ ಲಭಿಸುವ ಕೂಲಿ ಹಾಗೆಯೇ ಅವರಿಗೆ ದೊರಕಬಹುದಾದ ಕೆಲಸದ ಅವಕಾಶಗಳನ್ನು ಹೊಂದಿಕೊಂಡಿದೆ. ಕಳೆದ ಕೆಲವು ವರ್ಷಗಳಿಂದ ಕೃಷಿ ಕೂಲಿಗಾರರ ವಾರ್ಷಿಕ ಕೆಲಸದ ದಿನಗಳಲ್ಲಿ ಬಹಳ ಕಡಿತವಾಗಿದೆಯೆಂದು ತಿಳಿದು ಬರುತ್ತದೆ. 1964-65ರಲ್ಲಿ 208 ದಿವಸಗಳಿದ್ದು, 1974-75 ರಲ್ಲಿ 185ಕ್ಕೆ ಇಳಿದಿದೆ. ಅದೇ ಸಮಯದಲ್ಲಿ ಮಹಿಳೆಯರದ್ದು 138ರಿಂದ129ಕ್ಕೂ 15 ವರ್ಷಗಳ ಕೆಳಗಿನ ಮಕ್ಕಳದ್ದು 167ರಿಂದ 145ಕ್ಕೂ ಇಳಿದಿದೆ.

ತೀವ್ರ ಸ್ವರೂಪದ ಒಕ್ಕಲುತನ ಪದ್ಧತಿ ಜಾರಿಯಲ್ಲಿದ್ದರೆ ಮಾತ್ರ ಕೃಷಿ ಕಾರ್ಮಿಕರಿಗೆ ನೌಕರಿಯ ಅವಕಾಶ ಸಿಗಲು ಸಾಧ್ಯ. ಕೆಲಸ ಮಾಡುವ ಕೈಗಳು ಕಡಿಮೆ ಇದ್ದರೆ ಹೆಚ್ಚು ಅನುಕೂಲ, ಇಂದಿನ ಪರಿಸ್ಥಿತಿಯಲ್ಲಿ ದೊಡ್ಡ ಭೂ ಹಿಡುವಳಿದಾರರ ಸಂಖ್ಯೆ ಹೆಚ್ಚಾಗಿರುವಾಗ, ಇಂಥ ಭೂಮಿಯಲ್ಲಿ ಈ ಹೊತ್ತಿಗೂ ಕೂಡ ಅತಿ ಹೆಚ್ಚಿನ ಸುಲಿಗೆಗೆ ಮೂಲವಾದ ಪಾಲಿಗಾಗಿ ದುಡಿಯುವ ಪದ್ಧತಿಯೇ ಜೀವಂತವಿರುವಾಗ ತೀವ್ರತರದ ಕೃಷಿ ಪದ್ಧತಿ ಜಾರಿಯಲ್ಲಿ ತರುವುದು ಸಾಧ್ಯವಿಲ್ಲ. ಆದ್ದರಿಂದ ಕೆಲಸದ ಅವಕಾಶ ವಿಶಾಲಗೊಳ್ಳುತ್ತಿಲ್ಲ. ಗ್ರಾಮಾಂತರ ಕಾರ್ಮಿಕರ ವಿಚಾರಣಾ ಸಮಿತಿಯ ವರದಿಗನುಸಾರವಾಗಿ 1964-65ರಿಂದ 1974-75 ರವರೆಗೆ ಗ್ರಾಮಾಂತರ ಪ್ರದೇಶದಲ್ಲಿ ಮನೆ ಹೊಂದಿರುವವರ ಸಂಖ್ಯೆ 16.6 ರಷ್ಟು ಹೆಚ್ಚಿದರೆ, ಕೃಷಿ ಕೂಲಿಗಾರರ ಮನೆಗಳ ಸಂಖ್ಯೆ 35 ರಷ್ಟು ಜಾಸ್ತಿಯಾಗಿದೆ.

ಏನೂ ಭೂಮಿಯಿಲ್ಲದವರ ಸಂಖ್ಯೆ ಹೆಚ್ಚಾಗಿರುವುದರಿಂದಲೂ ಅದರಂತೆಯೇ ತುಂಡು ಭೂಮಿ ಉಳ್ಳವರೂ ಜಾಸ್ತಿಯಾಗಿರುವುದರಿಂದ ಕೃಷಿ ಕಾರ್ಮಿಕರ ಮನೆತನಗಳು ಹೆಚ್ಚಾಗಲು ಮುಖ್ಯ ಕಾರಣವಾಗಿರಬಹುದು. ಈ ರೀತಿ ಕೃಷಿ ಕೂಲಿಗಾರರ ಮತ್ತು ತುಂಡು ಹೊಲದ ಮನೆತನಗಳು ಹೆಚ್ಚಾಗುತ್ತಿದ್ದಂತೆಯೇ ಪ್ರತಿವರ್ಷ ಕೆಲಸದ ಅವಕಾಶ ಕಡಿಮೆಯಾಗುತ್ತಿದೆ.

ಇವರ ಪರಿಸ್ಥಿತಿ ಹದಗೆಡಲು ಮತ್ತೊಂದು ಕಾರಣವೇನೆಂದರೆ, ಕಳೆದ ಹತ್ತಾರು ವರ್ಷಗಳಿಂದ ಕೃಷಿ ಕಾರ್ಮಿಕರ ಗ್ರಾಹಕರ ಬೆಲೆ 1960ರ ಮೂಲ ಹಿಡಿದರೆ 143 ರಿಂದ 1964-65 ರಲ್ಲಿ 157, 1974-75 ರಲ್ಲಿ 368ಕ್ಕೆ ಏರಿದೆ. ಇದು ಕೃಷಿ ಕಾರ್ಮಿಕರಿಗೆ ದೊರೆಯುವ ಹೆಚ್ಚಿನ ಸಂಬಳವನ್ನು ನುಂಗಿದೆ. ಈ ಬೆಲೆಯೇರಿಕೆಯ ಸಂಖ್ಯೆಯನ್ನು ಸರಕಾರ ಪ್ರಕಟಿಸಿದೆ. ವಾಸ್ತವವಾಗಿ ಈ ಏರಿಕೆ ಇನ್ನೂ ಹೆಚ್ಚಾಗಿದೆ. ಕೃಷಿ ಕಾರ್ಮಿಕರ ಸಂಬಳ ಹೆಚ್ಚಿಸಿದ್ದೇವೆಂದು ಹೇಳಿದರೂ ಕೂಡ ಬೆಲೆಯಲ್ಲಿಯ ಹೆಚ್ಚಳದಿಂದಾಗಿ ಸಂಬಳದ ಏರಿಕೆ ಬರೇ ಗೌಣವೇ ಸರಿ.

ಕೃಷಿ ಉದ್ಯೋಗದಲ್ಲಿ ಕೆಲಸದ ಅವಕಾಶದ ಕುರಿತಾಗಲೀ ಕೃಷಿ ಕೆಲಸದಲ್ಲಿ ವೇತನದ ವಿಷಯದಲ್ಲಾಗಲೀ, ಕೃಷಿ ಕಾರ್ಮಿಕರ ಪರಿಸ್ಥಿತಿ ಮತ್ತಷ್ಟು ನಿಕೃಷ್ಟವಾಗಿದೆಂದೇ ಹೇಳಬೇಕಾಗುತ್ತದೆ. ಸುಲಿಗೆ ಮಾಡುವ ಪದ್ಧತಿಯ ಮುಂದುವರಿಕೆಯೂ; ಅತ್ಯಾವಶ್ಯಕ ವಸ್ತುಗಳ ಬೆಲೆಯಲ್ಲಿ ಹೆಚ್ಚಳವೂ ಕೃಷಿ ಕಾರ್ಮಿಕರ ಪರಿಸ್ಥಿತಿ ಹದಗೆಡುವುದಕ್ಕೆ ಮುಖ್ಯ ಕಾರಣ. ಇವರಿಗೆ ಸಿಗುವ ನಿಜವಾದ ವೇತನವಾಗಲೀ ಸರಕಾರ ನಿರ್ಣಯಿಸಿದ ಕನಿಷ್ಟ ವೇತನವಾಗಲೀ, ಕೃಷಿ ಕಾರ್ಮಿಕರ ಆಹಾರದ ಅವಶ್ಯಕತೆಗಳಿಂದ ಕಡಿಮೆಯಾಗಿರುತ್ತದೆ. ಒಬ್ಬ ವ್ಯಕ್ತಿಗೆ 2000—2200 ಕೆಲೋರೀಸ್ (ಆಹಾರದ ಪೌಷ್ಟಿಕತೆ) ಬೇಕೆಂದು ತಿಳಿದು ಮಹಾರಾಷ್ಟ್ರ ಸರಕಾರ ನೇಮಿಸಿದ ಪಾಗೆ ಸಮಿತಿ ಕೃಷಿ ಕಾರ್ಮಿಕರಿಗೆ ರೂ. 4 ದಿನ ಕೂಲಿ ನಿರ್ಣಯಿಸಿತ್ತು. ಇತ್ತೀಚೆಗೆ ಡಾ. ಅಭಯಬಂಗ ಇವರು ಆ ಸಮಿತಿಯ ಶಿಫಾರಸನ್ನ ವಿಮರ್ಷೆ ಮಾಡಿ, ಅದು ಕೃಷಿ ಕಾರ್ಮಿಕರ ಆಹಾರದ ಪೌಷ್ಟಿಕತೆಯ ಅವಶ್ಯಕತೆಯನ್ನು ಕಡಿಮೆ ಅಂದಾಜು ಮಾಡಿದೆಂಬ ಅಭಿಪ್ರಾಯ ವ್ಯಕ್ತ ಮಾಡಿದ್ದಾರೆ.

ಕೃಷಿ ಮತ್ತು ಇತರ ಗ್ರಾಮಾಂತರ ಪ್ರದೇಶದ ಕಾರ್ಮಿಕರ ಪೌಷ್ಟಿಕ ಆಹಾರದ ಕುರಿತು ಇನ್ನೂ ಹೆಚ್ಚಿನ ಅಭ್ಯಾಸಮಾಡಿ ಡಾ. ಬಂಗ ಅವರು ಇವರಿಗೆ ಕನಿಷ್ಟ ರೂ. 12.10 ಕೂಲಿ ಸಿಗಬೇಕೆಂದು ಹೇಳಿದ್ದಾರೆ. "ನಾನು ಶಿಫಾರಸು ಮಾಡಿರುವ ದಿವಸಕ್ಕೆ ರೂ. 12-10 ಕನಿಷ್ಟ ವೇತನ ಸರಕಾರದ ಕಮಿಟಿಯ ಶಿಫಾರಸಿಗಿಂತ ಮೂರು ಪಟ್ಟು ಜಾಸ್ತಿಯಾಗಿರುತ್ತದೆ. ಅದರೂ ಕೂಡ ಇದು ಬರೇ ಜೀವಂತ ಉಳಿಯಲಿಕ್ಕೆ ಸಾಕಾಗುವ ಕೂಲಿಯಾಗಿರುತ್ತದೆ. ಇದು ನಿಸಿಸಮನಾದ ಪಗಾರವೂ ಅಲ್ಲ, ಆ ನಾ ರೋಗ್ಯ ಬಾಣಂತನದ ಅಥವಾ ಮುಂದಿತನದ ವ್ಯವಸ್ಥೆಯೂ ಅದರಲ್ಲಿಲ್ಲ". ಎಂದು ಹೇಳಿದ್ದಾರೆ.

ಬ್ರಿಟಿಷರ ವಿರುದ್ಧ ನಡೆಸಿದ ಸ್ವಾತಂತ್ರ್ಯ ಹೋರಾಟದ ಸಮಯದಲ್ಲಿ ಸಮಾಜದ ಎಲ್ಲ ವರ್ಗಗಳ ಜನರ– ಕೃಷಿ ಕೂಲಿಗಾರ, ರೈತ, ಕಾರ್ಮಿಕ, ವಿದ್ಯಾರ್ಥಿ. ಯುವ ಜನತೆ, ಮಹಿಳೆ– ಬೆಂಬಲ ಪಡೆಯುವ ಉದ್ದೇಶದಿಂದ ನಾನಾಥರದ ಆಶ್ವಾಸನೆಗಳನ್ನು ನೀಡಿ; ಅಧಿಕಾರ ಪಡೆದ ನಂತರವೂ ಚುನಾವಣೆಯ ಸಮಯದಲ್ಲಿ ಮತ ಗಿಟ್ಟಿಸುವ ಸಲುವಾಗಿ ಎಲ್ಲಾ ಮಾಡುತ್ತೇವೆಂದು ಹೇಳಿದ ಕಾಂಗ್ರೆಸ್ ಮೂವತ್ತಾರು ವರ್ಷದ ತನ್ನ ಆಡಳಿತೆಯಲ್ಲಿ ಕೃಷಿ ಕಾರ್ಮಿಕರನ್ನು ತುಳಿಯುತ್ತಲೇ ಬಂದಿದೆ. ಅವರ ಹೋರಾಟದ ಫಲವಾಗಿ ಕೆಲವು ಅನುಕೂಲತೆಗಳನ್ನು, ಪಶ್ಚಿಮ ಬಂಗಾಲ, ತ್ರಿಪುರಾಗಳಲ್ಲಿ ಎಡರಂಗ ಅಧಿಕಾರದಲ್ಲಿರುವುದರಿಂದಲೂ, ಹಾಗೆಯೇ ಕೇರಳದಲ್ಲಿ ಎಡ ಪ್ರಜಾಪ್ರಭುತ್ವ ರಂಗದ ಸರಕಾರ ಇದ್ದಾಗ ಕನಿಷ್ಟ ಕೂಲಿಯಲ್ಲಿ ಹೆಚ್ಚಳ ಮುಂದಿತನದ ವೇತನ ಮತ್ತಿನ್ನಿತರ ಸೌಕರ್ಯಗಳನ್ನು ಪಡೆಯಲು ಶಕ್ಯವಾಗಿದೆ.

ಇಡೀ ದೇಶದ ಚಿತ್ರ ನೋಡಿದರೆ, ಕೃಷಿ ಕಾರ್ಮಿಕರ ಸಂಘಟನೆ ಬಹಳ ಬಲಹೀನವಾಗಿದೆ. ಅವರ ಸಂಘಟನೆಯನ್ನು ವಿಸ್ತಾರಗೊಳಿಸಬೇಕೆಂದು ಅಖಿಲ ಭಾರತ ಕೃಷಿ ಕಾರ್ಮಿಕರ ಸಂಘಟನೆ ತನ್ನ ಪ್ರಯತ್ನ ಮುಂದುವರಿಸಿದೆ.

ಕರ್ನಾಟಕದಲ್ಲಿ ಹೇಳಿಕೊಳ್ಳುವಂಥ ಕೃಷಿ ಕಾರ್ಮಿಕರ ಸಂಘಟನೆ ಅಸ್ತಿತ್ವದಲ್ಲಿಲ್ಲ. ಗ್ರಾಮಾಂತರ ಪ್ರದೇಶದಲ್ಲಿ ಬಹುಸಂಖ್ಯಾತರಾಗಿರುವ ಕೃಷಿ ಕಾರ್ಮಿಕರನ್ನೂ, ಬಡ ರೈತರನ್ನೂ ಸಂಘಟಿಸುವುದರ ಸಲುವಾಗಿ ಎಲ್ಲರೂ ಪ್ರಯತ್ನ ಮಾಡುವುದು ಅತ್ಯಗತ್ಯ

ಬಸ್ ಸೌಕರ್ಯಕ್ಕಾಗಿ SFI ಹೋರಾಟ

ಹೊಸಪೇಟೆ ವಿಜಯನಗರ ಕಾಲೇಜಿಗೆ ಧರ್ಮಸಾಗರ ಮತ್ತು ಹೊಸಪೇಟೆ ನಡುವಿನ ಗ್ರಾಮಗಳಿಂದ ಸಮಯಕ್ಕೆ ಸರಿಯಾಗಿ ಬಸ್ ವ್ಯವಸ್ಥೆ ಇರದಿದ್ದುದನ್ನು ಹಾಗೂ ದೂರು ಮನವಿಗಳಿಗೆ ಮಾತು ಕೇಳದ ರಾಜ್ಯ ಸಾರಿಗೆ ಸಂಸ್ಥೆಯ ಅಧಿಕಾರಿ ವರ್ಗದವರ ಅಲಕ್ಷ್ಯನೀತಿಯನ್ನು ಪ್ರತಿಭಟಿಸಿ ಪಾಪಿನಾಯಕನಹಳ್ಳಿಯಲ್ಲಿ 29-7-83 ರಂದು "ಬಸ್ ರೋಖೋ" ಚಳುವಳಿಯನ್ನು ಭಾರತ ವಿದ್ಯಾರ್ಥಿ ಫೆಡರೇಷನ್ (ಎಸ್. ಎಫ್. ಐ) ನಾಯಕತ್ವದಲ್ಲಿ ವಿದ್ಯಾರ್ಥಿಗಳು ನಡೆಸಿದರು.

ಜಿಲ್ಲಾ ಸಾರಿಗೆ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಒಂದೆರಡು ದಿನಗಳಲ್ಲಿ ಬಸ್ ವ್ಯವಸ್ಥೆ ಮಾಡುವುದಾಗಿ ಭರವಸೆಯನ್ನಿತ್ತಿದ್ದಾರೆ.

ಭರವಸೆ ಈಡೇರದಿದ್ದರೆ ವಿದ್ಯಾರ್ಥಿಗಳು ಉಗ್ರಹೋರಾಟದ ಮಾರ್ಗ ಹಿಡಿಯುವುದು ಅನಿವಾರ್ಯವೆಂದು ಎಸ್.ಎಫ್.ಐ ಹೊಸಪೇಟೆ ನಗರ ಸಮಿತಿ ಸಂಬಂಧಿಸಿದ ಅಧಿಕಾರಿಗಳಿಗೆ ಮುನ್ನೆಚ್ಚರಿಕೆ ನೀಡಿದೆ.

ಕುದುರೆಮುಖ

ರೈತಸಂಘ ರಚನೆ

ದಿನಾಂಕ 11-7-83 ರಂದು ಆಳಂದ ತಾಲ್ಲೂಕಿನ ಕುದಮುಡ ಗ್ರಾಮದಲ್ಲಿ ಕರ್ನಾಟಕ ಪ್ರಾಂತ ರೈತ ಸಂಘದ ಘಟಕವನ್ನು ರಚಿಸಲಾಯಿತು.

ಪದಾಧಿಕಾರಿಗಳು ಅಧ್ಯಕ್ಷರು ಕೋತರೆ ಬಾಬುರಾವ ಉಪಾಧ್ಯಕ್ಷರಾಗಿ ಬಿರಾದಾರ ಗುರುಪಾದಪ್ಪ ಕಾರ್ಯದರ್ಶಿಯನ್ನಾಗಿ ರೇವಣಸಿದ್ದಪ್ಪ, ಪಾಟೀಲಸಹಕಾರ್ಯದರ್ಶಿಯಾಗಿ, ಬಸವರಾಜ ಮೇಲಕೇರಿ ಮತ್ತು ಖಜಾಂಚಿಯಾಗಿ ಶಿವಾನಂದ ಬಿರದಾರ ಅವರು ಆಯ್ಕೆಯಾದರು.

ನಾಗಪ್ಪ ಖೋಪಡೆ ಅವರು ಆ ಸಭೆಯ ಅಧ್ಯಕ್ಷತೆಯನ್ನು ವಹಿಸಿದ್ದರು.

ಸವದತ್ತಿ ಎಸ್. ಎಫ್. ಐ. ಗೆ ನೂತನ ಪದಾಧಿಕಾರಿಗಳು

ದಿನಾಂಕ 30-7-1983 ರಂದು ಸವದತ್ತಿಯ 'ಭಾರತ ವಿದ್ಯಾರ್ಥಿ ಫೆಡರೇಷನ್ (ಎಸ್.ಎಫ್.ಐ.) ಇದರ ಕಾಲೇಜು ಮತ್ತು ಮಾಧ್ಯಮಿಕ ಶಾಲೆಯ ಘಟಕಗಳ ಸರ್ವ ಸದಸ್ಯರ ಸಭೆಯಲ್ಲಿ 1983-84 ನೇ ವರ್ಷದ ನೂತನ ಪದಾಧಿಕಾರಿಗಳನ್ನು ಆಯ್ಕೆ ಮಾಡಲಾಯಿತು. ಕಾಲೇಜ ಘಟಕಕ್ಕೆ ಸಿ.ಸಿ. ಮುಂಡಾಸ್ ಅಧ್ಯಕ್ಷನಾಗಿಯೂ ಎಫ್. ಎಂ. ನಧಾಫ್, ಎಸ್.ಜಿ. ಹೊಳಿಮಠ, ಜೆ. ಪಿ. ಹಳಿಮನಿ, ಡಿ. ಎಸ್. ಗಿರಿಜಣ್ಣವರ, ಐ.ಪಿ. ಪಾಟೀಲ ಐದು ಜನ ಉಪಾಧ್ಯಕ್ಷರುಗಳಾಗಿಯೂ ವಿ.ಎಸ್. ವೈದ್ಯ ಕಾರ್ಯದರ್ಶಿಯಾಗಿಯೂ ಎಂ.ಸಿ. ಜೈನ್ ಸಹ-ಕಾರ್ಯದರ್ಶಿಯಾಗಿ ಮತ್ತು ಎಸ್. ಕೆ. ಹಾದಿಮನಿ ಕೋಶಾಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ. ಅಲ್ಲದೆ ಏಳು ಜನ ಸದಸ್ಯರಿರುವ ಒಂದು ಕಾರ್ಯಕಾರಿ ಸಮಿತಿಯು ಸಹ ಆಯ್ಕೆಯಾಗಿದೆ.

ಮಾಧ್ಯಮಿಕ ಶಾಲೆಯ ಘಟಕಕ್ಕೆ ಎಸ್. ಎಸ್. ಉಡಿಕೇರಿ ಅಧ್ಯಕ್ಷ. ಬಿ. ಸಿ. ನಾವದಗಿ ಕಾರ್ಯದರ್ಶಿ. ಎ. ಪಿ. ಮುತ್ತಿನ್ ಸಹ-ಕಾರ್ಯದರ್ಶಿ. ಎಸ್. ಎನ್. ಹೊನ್ನಬಿಂದಗಿ ಕೋಶಾಧ್ಯಕ್ಷ ಹಾಗೂ ಎಂ. ಎಸ್. ಶಿಂತ್ರಿ, ಎಸ್. ವಿ. ಸಂಪಗಾಂವ, ಆರ್. ಎ. ನದಾಫ್, ಆರ್. ಎಂ. ಸುತಗಟ್ಟಿ ಜಿ.ಎಂ. ಭೂತಿ ಈ ಐವರು ಉಪಾಧ್ಯಕ್ಷರುಗಳಾಗಿ ಆಯ್ಕೆಯಾಗಿದ್ದಾರೆ. ಅಲ್ಲದೆ ಒಂಬತ್ತು ಜನ ಸದಸ್ಯರಿರುವ ಒಂದು ಕಾರ್ಯಕಾರಿ ಸಮಿತಿಯನ್ನೂ ರಚಿಸಲಾಗಿದೆ. ನೂತನ ಪದಾಧಿಕಾರಿಗಳು ಎಸ್. ಎಫ್. ಐ. ಸಂಘಟನೆಯ ಉದ್ದೇಶಗಳಿಗಾಗಿ ಶ್ರಮಿಸುವುದಾಗಿ ಪ್ರತಿಜ್ಞೆ ಮಾಡಿದರು. ಸಭೆಯಲ್ಲಿ ಉಪಸ್ಥಿತರಿದ್ದ ನಿತ್ಯಾನಂದ ಸ್ವಾಮಿಗಳು ಮಾತನಾಡಿ ವಿದ್ಯಾರ್ಥಿಗಳು ಅಭ್ಯಾಸದ ಜೊತೆಗೆ ಸಂಘಟನೆ ಮತ್ತು ಹೋರಾಟಗಳನ್ನು ನಡೆಸುವ ಅವಶ್ಯಕತೆಯನ್ನು ವಿವರಿಸಿದರು.

ಉಡುಪಿ

ಕಾರ್ಮಿಕ ಸಂಘಟನೆಗಳ ಹಕ್ಕುಗಳ ದಿನ

ಅಖಿಲ ಭಾರತ ಮಟ್ಟದಲ್ಲಿ ಕಾರ್ಮಿಕ ಸಂಘಗಳ ಐಕ್ಯ ಹೋರಾಟದ ನೇತೃತ್ವದಲ್ಲಿರುವ "ರಾಷ್ಟ್ರೀಯ ಪ್ರಚಾರ ಸಮಿತಿ"ಯ ಕರೆಯಂತೆ ಉಡುಪಿಯಲ್ಲಿ ಸಂಯುಕ್ತ ಕಾರ್ಮಿಕ ಕ್ರಿಯಾವೇದಿಕೆಯು ಕಾರ್ಮಿಕ ಸಂಘಟನೆಗಳ ಹಕ್ಕುಗಳ ದಿನವನ್ನು 4-8-1983 ರಂದು ಆಚರಿಸಿತು.

ಈ ಕಾರ್ಯಕ್ರಮದ ಅಂಗವಾಗಿ ಸಿಐಟಿಯು, ಎಐಟಿಯುಸಿ, ನೇಯ್ಗೆ, ರೈತ ಸಂಘ, ಪ್ರೆಸ್, ಜೀವವಿಮ ಬ್ಯಾಂಕುಗಳಲ್ಲಿರುವ ಕಾರ್ಮಿಕ ಸಂಘಗಳ ಸದಸ್ಯರುಗಳು ಬಹು ಸಂಖ್ಯೆಯಲ್ಲಿ ಭಾಗವಹಿಸಿ ಸಂಜೆ ಗಂಟೆ 5-30 ಕ್ಕೆ ಉಡುಪಿ ನಗರ ಸಭೆ ಕಛೇರಿ ಮುಂಭಾಗದಲ್ಲಿ ಭಾರಿ ಮತ ಪ್ರದರ್ಶನದ ಮೂಲಕ ಕೇಂದ್ರ ಸರಕಾರವು ತರಲು ಉದ್ದೇಶಿಸಿರುವ ನಾಲ್ಕು ಮಸೂದೆಗಳನ್ನು — ಕಾರ್ಮಿಕ ಸಂಘಗಳ (ತಿದ್ದುಪಡಿ) ಮಸೂದೆ, ಕಾರ್ಮಿಕ ವಿವಾದಗಳ (ತಿದ್ದುಪಡಿ) ಮಸೂದೆ, ವೇತನ ಪಾವತೀ (ತಿದ್ದುಪಡಿ) ಮಸೂದೆ ಮತ್ತು ಆಸ್ಪತ್ರೆ ಮತ್ತು ಇತರ ಸಂಸ್ಥೆಗಳಿಗೆ ಸಂಬಂಧಿಸಿದ ವಿವಾದಗಳ ಮಸೂದೆಗಳನ್ನು ಪ್ರತಿಭಟಿಸಿದರು. ಕೇಂದ್ರ ಸರಕಾರದ ಕಾರ್ಮಿಕ ವಿರೋಧ ನೀತಿಯನ್ನು ಪ್ರತಿಭಟಿಸಿ ಹೋರಾಡುವ ನಿರ್ಧಾರ ಕೈಕೊಂಡರು.

ಸ್ವಾತಂತ್ರ್ಯ ಚಳುವಳಿಯಲ್ಲಿ ವಿದ್ಯಾರ್ಥಿಗಳ ಪಾತ್ರ ಮತ್ತು ಇಂದಿನ ಕರ್ತವ್ಯಗಳು

ನಮ್ಮ ದೇಶದ ದುರಾದೃಷ್ಟವೆಂದರೆ ಸ್ವಾತಂತ್ರ್ಯ ಹೋರಾಟದಲ್ಲಿ ಜನತೆಯ ಪಾತ್ರವನ್ನು ಅದರಲ್ಲೂ ವಿದ್ಯಾರ್ಥಿ-ಯುವಜನತೆಯ ಪಾತ್ರವನ್ನು ಚರಿತ್ರೆಯಿಂದ ತೆಗೆದು ಹಾಕಲಾಗಿದೆ. ಮುಂಬರುವ ಪೀಳಿಗೆಯ ಜನಾಂಗವು ಈ ಚರಿತ್ರೆಯಿಂದ ಸ್ಫೂರ್ತಿ ಪಡೆಯದಿರಲಿ ಎಂಬುದೇ ಇದರ ಹಿಂದಿರುವ ಉದ್ದೇಶ, ಸ್ವಾತಂತ್ರ್ಯ ಹೋರಾಟದಲ್ಲಿ ವಿದ್ಯಾರ್ಥಿ ಸಮುದಾಯವು ನಿರ್ವಹಿಸಿದ ಮಹತ್ವ ಪೂರ್ಣ ಪಾತ್ರವನ್ನು ಆ ಹೋರಾಟದಿಂದ ಪ್ರತ್ಯೇಕಿಸಿ ಅಂದಿನ ಕಾಲದ ಯುವಜನತೆ ಮಾಡಿದ ಧೀರೋದ್ಧಾತ ತ್ಯಾಗಗಳಿಂದ ಇಂದಿನ ವಿದ್ಯಾರ್ಥಿಗಳು ಸ್ಫೂರ್ತಿ ಪಡೆಯದಿರಲೆಂದೇ ಮರೆಮಾಚಲಾಗಿದೆ.

ಭಾರತ ವಿದ್ಯಾರ್ಥಿ ಫೆಡರೇಷನ್ (ಎಸ್.ಎಫ್.ಐ.)ನ ಉತ್ತರಪ್ರದೇಶದ ನಾಲ್ಕನೇ ರಾಜ್ಯ ಸಮ್ಮೇಳನವನ್ನು ಉದ್ಘಾಟಿಸುತ್ತಾ ಭಗತ್‌ಸಿಂಗ್‌ರವರ ಸಂಗಾತಿಯಾದ ಕಾಮ್ರೇಡ್ ಶಿವವರ್ಮ ಈ ಭಾಷಣವನ್ನು ಮಾಡಿದರು. ಎಸ್.ಎಫ್.ಐ. ಮುಖಪತ್ರಿಕೆ 'ಸ್ಟೂಡೆಂಟ್ ಸ್ಟ್ರಗಲ್'ನ ಮಾರ್ಚ್ ತಿಂಗಳ ಸಂಚಿಕೆಯಲ್ಲಿ ಈ ಭಾಷಣದ ಸಾರಾಂಶವನ್ನು ವಿಶೇಷ ಲೇಖನವಾಗಿ ಪ್ರಕಟಿಸಲಾಗಿತ್ತು. ಈ ಲೇಖನವನ್ನು ಎಸ್. ಆರ್. ಆರಾಧ್ಯ ಕನ್ನಡಕ್ಕೆ ಅನುವಾದಿಸಿದ್ದಾರೆ.

ಪ್ರಿಯ ಸ್ನೇಹಿತರೇ, ಸಮ್ಮೇಳನದ ಪ್ರತಿನಿಧಿಗಳೇ ಮತ್ತು ಡೆಹರಾಡೂನ್ ನಾಗರೀಕರೇ, ಮುಖ್ಯ ವಿಷಯಕ್ಕೆ ಬರುವ ಮೊದಲು ನಾನು ಕೆಲವು ಅಂಶಗಳನ್ನು ಸ್ಪಷ್ಟಪಡಿಸಬಯಸುತ್ತೇನೆ. ನನ್ನ ರಾಜಕೀಯ ಜೀವನದ ಅನುಭವಗಳನ್ನು ನಿಮ್ಮ ಮುಂದಿಡಬೇಕೆಂದು ಕೋರಲಾಗಿದೆ. ಅರವತ್ತೈದು ವರ್ಷಗಳಷ್ಟು ದೀರ್ಘ ಅವಧಿಯ ಅನುಭವಗಳನ್ನು ಒಂದು ಅಥವಾ ಎರಡು ಗಂಟೆಗಳಲ್ಲಿ ತಿಳಿಸಲು ಸಾಧ್ಯವಿಲ್ಲ. ಆದ್ದರಿಂದ ಕೆಲವು ಅಂಶಗಳ ಮೇಲೆ ನಾನು ಹೆಚ್ಚು ವಿವರಣೆ ನೀಡಲು ಹೋಗುವುದಿಲ್ಲ. ನಾನು ಪ್ರಥಮ ಬಾರಿಗೆ 1929ರಲ್ಲಿ ಡೆಹರಾಡೂನ್ ನಗರಕ್ಕೆ ಬಂದಿದ್ದೆನು. ನಂತರ 1956ರಲ್ಲಿ ಮತ್ತು ಮೂರನೆಯ ಬಾರಿಗೆ ನಾನು ನಿಮ್ಮ ಮುಂದೆ ಬಂದಿದ್ದೇನೆ. 1929ರ ಮೇ ತಿಂಗಳಲ್ಲಿ ಲಾರ್ಡ್ ಇರ್ವಿನ್ ನಮ್ಮ ಭೇಟಿಗಾಗಿ ಡೆಹರಾಡೂನ್‌ಗೆ ಬಂದಿದ್ದನು. ನಾನು ಮತ್ತು ನನ್ನ ಗೆಳೆಯ ಜಯದೇವ್ ಲಾರ್ಡ್ ಇರ್ವಿನ್ನನ ಭೇಟಿಗೆ ಬಂದಿದ್ದೆವು. ದುರಾದೃಷ್ಟವಶಾತ್ ಲಾರ್ಡ್ ಇರ್ವಿನ್ ಅವನ ಬೇಟೆಯಾಟದಲ್ಲಿಯಾಗಲೀ ನಾವು ನಮ್ಮ ಬೇಟೆಯಾಟದಲ್ಲಾಗಲೀ ಗೆಲ್ಲಲಾಗಲಿಲ್ಲ. ಇಬ್ಬರೂ ವಾಪಸಾದೆವು. ಆದರೆ ಈ ಅವಧಿಯಲ್ಲಿ ಡೆಹರಾಡೂನ್ ನಗರವು ರಾಜ್ಯದಿಂದ ಮಾತ್ರವಲ್ಲ ಇಡೀ ದೇಶದ ನಾನಾ ಭಾಗಗಳಿಂದ ಬಂದಿದ್ದ ಗೂಢಚಾರರಿಂದ ತುಂಬಿಹೋಗಿತ್ತು. ಇಂತಹ ಪರಿಸ್ಥಿತಿ ಇದ್ದಾಗ್ಯೂ ಈ ನಗರ ನನಗೆ ಅನೇಕ ದಿನಗಳ ವರೆಗೆ ಆಶ್ರಯ ನೀಡಿತ್ತು. ಸ್ನೇಹಿತರೇ, ಈ ದಿನ ವಿದ್ಯಾರ್ಥಿ ಸಮಸ್ಯೆಗಳ ಕುರಿತು ಹೆಚ್ಚು ಮಾತನಾಡುವುದಿಲ್ಲ, ನನಗೆ ಇದು ಇಷ್ಟವಿಲ್ಲವೆಂದಲ್ಲ ಆದರೆ ಮುಂಬರುವ ದಿನಗಳಲ್ಲಿ ನೀವೇ ಈ ಸಮಸ್ಯೆಗಳ ಬಗ್ಗೆ ಆಲೋಚಿಸಿ, ಕಾರಣ ಮತ್ತು ಪರಿಹಾರಗಳನ್ನು ಕಂಡುಕೊಳ್ಳುತ್ತೀರಿ.

ದೇಶಕ್ಕೆ ಪ್ರಾಮುಖ್ಯವೆಂದು ನಾನು ಗಣಿಸಿದ ಕೆಲವು ಅಂಶಗಳ ಬಗ್ಗೆ ನಾನು ಚರ್ಚಿಸಬಯಸುತ್ತೇನೆ. ಅದಕ್ಕಿಂತ ಮೊದಲು ಎಸ್.ಎಫ್.ಐ. ಸಮ್ಮೇಳನದ ವೇದಿಕೆಯಲ್ಲಿ ಮಾತನಾಡುವ ಈ ಅವಕಾಶವನ್ನು ಸ್ವಾತಂತ್ರ್ಯ ಚಳುವಳಿಯಲ್ಲಿ ವಿದ್ಯಾರ್ಥಿ ಮತ್ತು ಯುವಜನತೆ ವಹಿಸಿದ ಪಾತ್ರವನ್ನು ಕುರಿತು ವಿವರಿಸಲು ಉಪಯೋಗಿಸಿಕೊಳ್ಳುತ್ತೇನೆ. ನನಗಿಂತ ಮೊದಲು ಮಾತನಾಡಿದ ಭಾಷಣಕಾರರೊಬ್ಬರು ಈ ದಿನ ವಿದ್ಯಾರ್ಥಿ-ಯುವಜನ ಸಮುದಾಯಕ್ಕೆ ಸರಿಯಾದ ಮಾರ್ಗದರ್ಶನ ಕೊರತೆಯಿದೆ ಎಂದು ಹೇಳಿದರು. ಇದು ಖಚಿತ ಸರಿ. ಆದರೆ ಗಮನಿಸಬೇಕಾದ ಅಂಶವೆಂದರೆ ಅವರನ್ನು ದಿಕ್ಕು ತಪ್ಪಿಸಲಾಗಿದೆ. ಆಳುವ ವರ್ಗಗಳು ವಿದ್ಯಾರ್ಥಿಗಳು, ಯುವಜನರು ಮತ್ತಿತರ ವಿಭಾಗಗಳು ದೇಶದ ರಾಜಕೀಯದಿಂದ ದೂರವಿರಬೇಕೆಂದೇ ಸದಾ ಬುದ್ಧಿವಾದ ಹೇಳುತ್ತಿವೆ. ಆಳುವ ವರ್ಗಗಳು ಯಾವಾಗಲೂ ವಿದ್ಯಾರ್ಥಿ-ಯುವಜನತೆಯ ಮುಂದೆ ಯಾವುದೇ ಕಾರ್ಯಕ್ರಮ, ಶಿಕ್ಷಣ ಪದ್ಧತಿಯನ್ನು ಮುಂದಿಡುವುದಾಗಲಿ ಅಥವಾ ಪಠ್ಯಪುಸ್ತಕಗಳನ್ನು ಗೊತ್ತುಪಡಿಸುವುದರಲ್ಲಾಗಲೀ, ಯುವಜನತೆಯ ಒಂದು ವಿಭಾಗವನ್ನು ಸಂಪೂರ್ಣ ರಾಜಕೀಯ ಅಜ್ಞಾನದಲ್ಲಿಡುವ ಏಕೈಕ ಉದ್ದೇಶವನ್ನು ಹೊಂದಿರುತ್ತದೆ. ಅವರು ದೇಶದ ಬಗ್ಗೆ ಚಿಂತಿಸಬಾರದು, ಸಂಪೂರ್ಣ ಅಸಮರ್ಥರನ್ನಾಗಿಸಿ ಉದ್ಯೋಗಕ್ಕಾಗಿ ಅಥವಾ ಜೀವನ ನಿರ್ವಹಣೆಗಾಗಿ ಅಲೆಯುತ್ತಿರುವಂತೆ ಮಾಡಿದೆ. ಸ್ವಾಭಾವಿಕವಾಗಿ ಅವರು ಜಗಳಪ್ಪಯಿಂದ ಯಾವುದಾದರೂ ಡಕಾಯಿತರ ಗುಂಪನ್ನು ಸೇರಿಕೊಳ್ಳುವುದೋ ಅಥವಾ ರೈಲು ದರೋಡೆ ಮಾಡುವುದೋ ಅಥವಾ ಅಂತಹದೇ ಇತರ ಅಪರಾಧ ಕಾರ್ಯಗಳನ್ನು ಎಸಗಬಹುದು. ವಿದ್ಯಾರ್ಥಿ-ಯುವಜನ ಸಮುದಾಯದ ಒಂದು ದೊಡ್ಡ ವಿಭಾಗವನ್ನು ಸಮಾಜದ ವಾಸ್ತವ ಸಮಸ್ಯೆಗಳಿಂದ ಸದಾ ವಿಮುಖರನ್ನಾಗಿ ಮಾಡಲಾಗುತ್ತದೆ. ಇದು ನಮ್ಮ ಆಳುವ ವರ್ಗದ ನೀತಿ ಮಾತ್ರವಲ್ಲ; ಯಾವುದೇ ವರ್ಗ ಸಂಘರ್ಷದಿಂದ ಕೂಡಿದ ಸಮಾಜದಲ್ಲಿ ಶೋಷಕ ಮತ್ತು ಶೋಷಿತ ವರ್ಗದ ನಡುವೆ ಸಂಘರ್ಷವಿರುವ ಸಮಾಜದಲ್ಲಿ, ಆಳುವ ವರ್ಗಗಳು ಸದಾ ಇದೇ ನೀತಿಯನ್ನು ಅನುಸರಿಸಿ ಜನಸಾಮಾನ್ಯರನ್ನು ರಾಜಕೀಯ ಅಜ್ಞಾನದಲ್ಲಿಟ್ಟು ತಮ್ಮ ಹಿತ ಸಾಧನೆ ಮಾಡಿಕೊಳ್ಳುತ್ತಾರೆ.

ಅಸಹಕಾರ ಚಳವಳಿ

ಎಲ್ಲಕ್ಕಿಂತ ಮೊದಲು ನಾನು ಸ್ವಾತಂತ್ರ್ಯ ಚಳುವಳಿಯಲ್ಲಿ ವಿದ್ಯಾರ್ಥಿಗಳು ನಿರ್ವಹಿಸಿದ ಪಾತ್ರದ ಕುರಿತು ಸಂಕ್ಷಿಪ್ತವಾಗಿ ಹೇಳುತ್ತೇನೆ. 1921ರಲ್ಲಿ ಗಾಂಧೀಜಿಯು ಅಸಹಕಾರ ಚಳುವಳಿಯನ್ನು ಪ್ರಾರಂಭಿಸಿದಾಗ ಸಮಾಜದ ಎರಡು ವಿಭಾಗಗಳಿಗೆ ಮಾತ್ರ ಕರೆ ನೀಡಿದ್ದರು. ಮೊದಲನೆಯದಾಗಿ ವಕೀಲರನ್ನು ತಮ್ಮ ವೃತ್ತಿ ತೊರೆದು ಚಳುವಳಿಯಲ್ಲಿ ಧುಮುಕಲು ಮತ್ತು ಎರಡನೆಯದಾಗಿ ವಿದ್ಯಾರ್ಥಿಗಳು ಶಾಲಾ-ಕಾಲೇಜುಗಳನ್ನು ಬಹಿಷ್ಕರಿಸಿ ಚಳವಳಿಗೆ ಸೇರಿ ಸ್ವಾತಂತ್ರ್ಯ ಹೋರಾಟಕ್ಕೆ ಒಂದು ಹೊಸ ಆಯಾಮವನ್ನು ನೀಡುವಂತೆ ಗಾಂಧೀಜಿ ಕರೆ ನೀಡಿದರು. ನಾನೂ ಅವರಲ್ಲೊಬ್ಬನಾಗಿದ್ದ. ಆ ಸಮಯದಲ್ಲಿ ಜೈಲುಗಳನ್ನು ತುಂಬಿದವರಲ್ಲಿ ಶೇ. 40ರಷ್ಟು ಮಂದಿ ಶಾಲಾ-ಕಾಲೇಜುಗಳ ವಿದ್ಯಾರ್ಥಿಗಳಾಗಿದ್ದರು. ವಿದ್ಯಾರ್ಥಿಗಳಿಲ್ಲದೆ ಸ್ವರಾಜ್ಯದ ಘೋಷಣೆಯನ್ನು ಹಳ್ಳಿಯಿಂದಹಳ್ಳಿಗೆ ಮನೆಯಿಂದ ಮನೆಗೆ ಕೊಂಡೊಯ್ಯುವುದು ಸಾಧ್ಯವಾಗುತ್ತಿರಲಿಲ್ಲ. ಶಾಲೆಗೆ ಬಂದು ಹೋಗುವುದನ್ನು ಬಿಟ್ಟರೆ ಮನೆಯಿಂದ ಹೊರಗೇ ಹೋಗದಿದ್ದ ವಿದ್ಯಾರ್ಥಿಗಳು, ಎಂದೂ ಹಳ್ಳಿಗಳನ್ನೇ ನೋಡಿರದ ವಿದ್ಯಾರ್ಥಿಗಳೂ ಖಾದಿ ಬಟ್ಟೆಯನ್ನು ತೊಟ್ಟು, ಹೆಗಲಿಗೊಂದು ಚೀಲ ನೇತುಹಾಕಿಕೊಂಡು ಸ್ವರಾಜ್ಯದ ಘೋಷಣೆಯನ್ನು ಗ್ರಾಮಾಂತರ ಪ್ರದೇಶದೆಡೆಗೆ ಕೊಂಡೊಯ್ದರು. ಇದು ಅವರ ಮೊಟ್ಟ ಮೊದಲ ಪಾತ್ರ. ನಾವು ಕ್ರಾಂತಿಕಾರಿ ಚಳುವಳಿಯ ಕಡೆ ಕಣ್ಣು ಹಾಯಿಸಿದರೆ ಬಹಳಷ್ಟು ಕ್ರಾಂತಿಕಾರಿಗಳು ಶಾಲಾ-ಕಾಲೇಜುಗಳ ಮೂಲಕವೇ ಈ ರಂಗವನ್ನು ಪ್ರವೇಶಿಸಿದರು. ಆಜಾದ್ ಮತ್ತು ರಾಜ್‌ಗುರು ಸಂಸ್ಕೃತ ಭಾಷಾ ವಿದ್ಯಾರ್ಥಿಗಳಾಗಿದ್ದರು. ಭಗತ್‌ಸಿಂಗ್, ಸುಖದೇವ್, ಭಗವತಿ ಚರಣ್‌ದೋಹ್ರಾ ಲಾಹೋರಿನ ತಿಲಕರ ರಾಜಕೀಯಶಾಲೆ ಎಂದು ಕರೆಯಲ್ಪಡುತ್ತಿದ್ದ ನ್ಯಾಷನಲ್ ಕಾಲೇಜಿನ ವಿದ್ಯಾರ್ಥಿಗಳಾಗಿದ್ದರು. ಮಹಾವೀರಸಿಂಗ್, ಸಾಲಿಗ್ರಾಮ ಶುಕ್ಲಾ ಕಾನ್‌ಪುರದ ಡಿ.ಎ.ವಿ ಕಾಲೇಜಿನ ವಿದ್ಯಾರ್ಥಿಗಳಾಗಿದ್ದರು. ನಾನು ಈಗ ಮುಂದಿಟ್ಟಿರುವುದು ಹುತಾತ್ಮ ಸಂಗಾತಿಗಳ ಪಟ್ಟಿ. ಹುತಾತ್ಮ ಪದವಿಯನ್ನು ಪಡೆಯಲಾಗದಿದ್ದ ಅನೇಕರು ಈ ಜಿಲ್ಲೆಯ ಎಲ್ಲಾ ಕಡೆ, ಈ ನಗರದಲ್ಲಿ ಮತ್ತು ಈ ಸಮ್ಮೇಳನದ ಸಭಾಂಗಣದಲ್ಲಿ ಇರುವುರೆಂದು ನಾನು ನಂಬಿದ್ದೇನೆ. ಬಂಗಾಳದಲ್ಲಿ ಶಾಂತಿ, ಸುನೀತಿ, ಪ್ರೀತಿಲತ ಮತ್ತು ವೀಣಾ ನೀವು ಕೇಳುತ್ತಿರುವ ಈ ಹೆಸರಿನ ಎಲ್ಲಾ ಸಂಗಾತಿಗಳೂ ಬಾಂಬು ಮತ್ತು ಪಿಸ್ತೂಲುಗಳನ್ನು ಹಿಡಿಯಲು ಶಾಲಾ-ಕಾಲೇಜುಗಳನ್ನು ತೊರೆದು ಹುತಾತ್ಮರಾದವರು. ಅಪ್ಪೊಂದು ಪ್ರಸಿದ್ಧ ಪ್ರಕರಣವಾದ ಚಿತ್ತಗಾಂಗ್ ಸಶಸ್ತ್ರದಂಗೆಯ ಬೆನ್ನೆಲುಬಾಗಿದ್ದವರು 16 ರಿಂದ 22 ವರ್ಷ ವಯಸ್ಸಿನ ಯುವಕ, ಯುವತಿಯರು. ಇದು ಅಂದಿನ ಕ್ರಾಂತಿಕಾರಿ ಚಳುವಳಿಗೆ ನಮ್ಮ ವಿದ್ಯಾರ್ಥಿಗಳು ಸಲ್ಲಿಸಿದ ಕೊಡುಗೆ.

೧೯೩೦ರ ಚಳುವಳಿ

ಇದಾದ ನಂತರ 1930–31ರ ಚಳುವಳಿ ನಡೆಯಿತು. ಈ ಚಳುವಳಿಯಲ್ಲೂ ಸಹ ಜೈಲುಗಳು ಯುವಜನರಿಂದ ತುಂಬಿದ್ದವು. ಕಾಮ್ರೇಡ್ ಪಿ. ಸುಂದರಯ್ಯನವರಿಂದ ಮೊದಲ್ಗೊಂಡು ಆ ಸಮಯದಲ್ಲಿ 16ವರ್ಷ ವಯಸ್ಸಿನಲ್ಲಿದ್ದ ಇಂದಿನ ಅನೇಕ ಮುಖಂಡರು ಜೈಲಿನಲ್ಲಿದ್ದರು. ಆಂಧ್ರ ಪ್ರದೇಶದ ರಾಜಾಮುಂಡ್ರಿಯಲ್ಲಿ ಮಾತ್ರವಲ್ಲ ದೇಶದಲ್ಲಿ ಎಲ್ಲೆಲ್ಲಿ ಯುವಜನತೆ ಮುನ್ನುಗ್ಗಿ ಲಾಠಿಗಳನ್ನು ಎದುರಿಸಿತೋ ಅಲ್ಲೆಲ್ಲಾ ಇದೇ ಪರಿಸ್ಥಿತಿಯಿತ್ತು. ಭಾರತೀಯರಿಗೆ ಒಂದು ಪಾಠ ಕಲಿಸಲೆಂದು ಇಂಗ್ಲೆಂಡಿನಿಂದ ಲಾರ್ಡ್ ವೆಲ್ಲಿಂಗ್‌ಡನ್‌ರನ್ನು ಭಾರತಕ್ಕೆ ಕಳುಹಿಸಲಾಯಿತು. ಅವನು ಭಾರತಕ್ಕೆ ಬಂದನಂತರ ಬಂಧನ ಕಾರ್ಯ ಪ್ರಾರಂಭವಾಯಿತು. ಆಗ ಇಂಗ್ಲೆಂಡಿನಲ್ಲಿದ್ದ ಗಾಂಧೀಜಿಯವರು ಭಾರತಕ್ಕೆ ಹಿಂತಿರುಗಿ ತಾನು ಯಾವುದೇ ಚಳುವಳಿಯನ್ನು ಪ್ರಾರಂಭಿಸಿಲ್ಲವೆಂದು ಘೋಷಿಸಿದರು. ಈ ಚಳುವಳಿಯಲ್ಲಿ ಲಾಠಿ ಏಟು ತಿಂದು ಮತ್ತು ಬಂಧನಕ್ಕೊಳಗಾದ ಜನರ ಸಂಖ್ಯೆ 1930–31ರ ಸಂಖ್ಯೆಗಿಂತ ಅನೇಕ ಪಾಲು ಹೆಚ್ಚಾಗಿತ್ತು. 1930–31ರ ಚಳುವಳಿ 'ಗಾಂಧೀಜಿಯ ಚಳುವಳಿ'ಯಾಗಿದ್ದರೆ 1932–33ರ ಈ ಚಳುವಳಿ "ಜನರ ಚಳುವಳಿ"ಯಾಯಿತು. ಭಾರತದ ಜನತೆ ಮತ್ತು ಲಾರ್ಡ್ ವೆಲ್ಲಿಂಗ್‌ಡನ್ ನಡುವಿನ ನೇರ ಸಂಘರ್ಷವಾಗಿತ್ತು. ಆರು ತಿಂಗಳೊಳಗೆ ಈ ಜನರನ್ನು ಶರಣಾಗಿಸಿ ತನ್ನ ಕಾಲ ಮುಂದೆ ಬೀಳಿಸುವುದಾಗಿ ಕೊಚ್ಚಿಕೊಂಡಿದ್ದ ಅದೇ ಲಾರ್ಡ್ ವೆಲ್ಲಿಂಗ್‌ಡನ್ 1933ರಲ್ಲಿ ಬಂಧಿತರನ್ನೆಲ್ಲಾ ಬಿಡುಗಡೆ ಮಾಡುವುದಾಗಿ ಭರವಸೆ ನೀಡಿ ಚಳುವಳಿಯನ್ನು ಹಿಂತೆಗೆದುಕೊಳ್ಳಬೇಕೆಂದು ಗಾಂಧೀಜಿಯವರನ್ನು ಪ್ರಾರ್ಥಿಸಿಕೊಂಡನು. ನಾನು ಈ ಚಳುವಳಿಯನ್ನು ಪ್ರಾರಂಭಿಸಿಲ್ಲವಾದ್ದರಿಂದ ಹಿಂತೆಗೆದುಕೊಳ್ಳಲು ತನ್ನಿಂದ ಸಾಧ್ಯವಾಗುವುದಿಲ್ಲವೆಂದು ಗಾಂಧೀಜಿ ಹೇಳಿದರು. ವೆಲ್ಲಿಂಗ್‌ಡನ್ ಕೊನೆಗೆ ತನ್ನ ಮುಖಭಂಗವನ್ನು ತಪ್ಪಿಸಿಕೊಳ್ಳಲು ಚಳುವಳಿಯನ್ನು ಹಿಂತೆಗೆದುಕೊಂಡಿರುವುದಾಗಿ ಬಹಿರಂಗವಾಗಿ ಘೋಷಿಸಲು ಗಾಂಧೀಜಿಯವರನ್ನು ಒತ್ತಾಯಿಸಿದನು. ಇದು ಭಾರತದ ಯುವಜನತೆಗೆ ದೊರೆತ ವಿಜಯ. ಇವು 1930–33ರ ಚಳುವಳಿಯ ನಿಜಾಂಶಗಳು.

ಸಂಘಟಿತ ವಿದ್ಯಾರ್ಥಿ ಚಳುವಳಿ

ಇದಾದ ಬಳಿಕ 1936ರಲ್ಲಿ ವಿದ್ಯಾರ್ಥಿ ಚಳುವಳಿ ಒಂದು ಸಂಘಟಿತ ಸ್ವರೂಪವನ್ನು ತಳೆಯಿತು. ಆ ನಂತರವೇ ವಿದ್ಯಾರ್ಥಿಗಳು ಸಂಘಟಿತ ರೀತಿಯಲ್ಲಿ ದೇಶದ ಸ್ವಾತಂತ್ರ್ಯದ ಪ್ರಶ್ನೆಯನ್ನು ಮುಂಚೂಣಿಯಲ್ಲಿಟ್ಟು ತಮ್ಮ ಸಮಸ್ಯೆಗಳ ಪರಿಹಾರಕ್ಕಾಗಿ ಹೋರಾಟ ನಡೆಸಿದರು. 1942ರಲ್ಲಿ ಇದರ ಪರಿಣಾಮಗಳು ಕಾಣಿಸಿಕೊಂಡವು. ನಾನೀಗ ನಿಮಗೆ 1942ರ ಭಾರತ ಬಿಟ್ಟು ತೊಲಗಿ ಚಳುವಳಿಗೆ ಸಂಬಂಧಿಸಿದ ಒಂದು ಘಟನೆಯನ್ನು ವಿವರಿಸುತ್ತೇನೆ. ನಾನಾಗ ಅಲಹಾಬಾದ್‌ನ ನೈನಿ ಜೈಲಿನಲ್ಲಿದ್ದೆನು. ನಗರದಲ್ಲಿ 144ನೇ ಸೆಕ್ಷನ್ ಹೇರಿ ಮೆರವಣಿಗೆ ಮತ್ತು ಪ್ರದರ್ಶನಗಳನ್ನು ನಿಷೇಧಿಸಲಾಗಿತ್ತು. ನಮ್ಮ ವಿದ್ಯಾರ್ಥಿಗಳು 144ನೇ ಸೆಕ್ಷನ್ ಉಲ್ಲಂಘಿಸಲು ನಿರ್ಧರಿಸಿದರು. ಲಾಲ್‌ಪದಂಧರ್‌ಸಿಂಗ್ ಎಂಬ ವಿದ್ಯಾರ್ಥಿಯೊಬ್ಬನು ತನ್ನ ಕೈಯಲ್ಲಿ ಬಾವುಟವೊಂದನ್ನಿಡಿದು ಮೆರವಣಿಗೆಯ ಮುಂಚೂಣಿಯಲ್ಲಿ ನಿಂತನು. ಬ್ರಿಟಿಷ್ ಜಿಲ್ಲಾ ನ್ಯಾಯಾಧೀಶನು ತನ್ನ ಸಂಪೂರ್ಣ ಬಲದೊಡನೆ ಹಾಜರಿದ್ದನು. ಅವನು ಮೆರವಣಿಗೆಯನ್ನು ವಾಪಸ್ ಪಡೆಯುವಂತೆ ಆಜ್ಞೆ ಮಾಡಿದನು. ವಿದ್ಯಾರ್ಥಿಗಳು ಮುಂದುವರಿಯುತ್ತಾ ನಡೆದರು. ಗುಂಡು ಹಾರಿಸಲು ಆಜ್ಞೆ ಮಾಡಲಾಯಿತು. ಲಾಲ್ ಪದಂಧರ್‌ಸಿಂಗ್‌ನ ಎದೆಗೆ ಗುಂಡು ತಗುಲಿ ಕುಸಿದುಬೀಳುತ್ತಿದ್ದನು. ಅವನ ಹಿಂದಿದ್ದ ವಿದ್ಯಾರ್ಥಿ ಬಾವುಟವನ್ನು ತನ್ನ ಕೈಗೆತ್ತಿಕೊಂಡು 'ಇನ್‌ಕ್ವಿಲಾಬ್ ಜಿಂದಾಬಾದ್' ಎಂಬ ಘೋಷಣೆಯೊಂದಿಗೆ ಮುಂದೆ ಹೆಜ್ಜೆಯಿಟ್ಟನು. ಅವನನ್ನೂ ಗುಂಡಿಕ್ಕಿ ಕೊಲ್ಲಲಾಯಿತು. ಮೂರನೆಯ ವಿದ್ಯಾರ್ಥಿಯೊಬ್ಬನು ಬಾವುಟವನ್ನು ಎತ್ತಿಕೊಂಡನು. ಉಳಿದ ವಿದ್ಯಾರ್ಥಿಗಳೆಲ್ಲಾ ಗಾಯಗೊಂಡು ಆಸ್ಪತ್ರೆ ಸೇರಿದರು. ಆದರೆ ಲಾಲ್‌ಪದಂಧರ್‌ಸಿಂಗ್ ಹುತಾತ್ಮನಾದನು. ಒಬ್ಬರಾದ ಮೇಲೊಬ್ಬರಂತೆ ಗುಂಡಿಗೆ ಎದೆಯೊಡ್ಡುತ್ತಾ ಬಾವುಟವನ್ನು ಎತ್ತಿಹಿಡಿದರು.

(ಮುಂದುವರಿಯುವುದು)

ಸ್ವಾತಂತ್ರ್ಯ ಚಳುವಳಿಯಲ್ಲಿ ಆಗಸ್ಟ್ ೯ ಮತ್ತು ಕಮ್ಯುನಿಸ್ಟರ ಪಾತ್ರ

-ಎನ್. ಕೆ. ಉಪಾಧ್ಯಾಯ

ಬ್ರಿಟಿಷರ ಗುಲಾಮಗಿರಿಯ ವಿರುದ್ಧ ನಮ್ಮ ದೇಶದ ಜನತೆ ನಡೆಸಿದ ಹೋರಾಟದಲ್ಲಿ ಆಗಸ್ಟ್ 9 ಬಹಳ ಮಹತ್ವದ ದಿನವಾಗಿದೆ. ನಮ್ಮ ದೇಶಕ್ಕೆ ಸ್ವಾತಂತ್ರ್ಯ ಹಸ್ತಾಂತರವಾದದ್ದು ಆಗಸ್ಟ್ 15 ಮಧ್ಯರಾತ್ರಿ. ಅನಂತರ ಆಗಸ್ಟ್ 15ನ್ನು ಸ್ವಾತಂತ್ರ್ಯಗಳಿಸಿದ ದಿನವನ್ನಾಗಿ ಆಚರಿಸಲಾಗುತ್ತಿದೆ. ಆಗಸ್ಟ್ 9ನ್ನು ನಿಧಾನವಾಗಿ ಮರೆಯಲಾಗುತ್ತಿದೆ.

ರಶ್ಯದ ಮಹಾಕ್ರಾಂತಿ

ರಶ್ಯದ ರಾಜಕೀಯ ಚರಿತ್ರೆಯಲ್ಲಿ ಅಕ್ಟೋಬರ್ ಕ್ರಾಂತಿ (ರಶ್ಯದ ಕ್ಯಾಲೆಂಡರಿನಂತೆ) ಅಂದರೆ 1917 ನವಂಬರ್ 7ರ ಕ್ರಾಂತಿ ಅತಿ ಮಹತ್ವದ್ದಾಗಿದೆ. ಆ ದಿವಸ ಕಮ್ಯುನಿಸ್ಟ್ ಪಾರ್ಟಿಯ ನೇತೃತ್ವದಲ್ಲಿ ಮಹಾನ್ ಕ್ರಾಂತಿ ಪುರುಷ ಲೆನಿನ್ನರ ಮುಖಂಡತ್ವದಲ್ಲಿ ಸಶಸ್ತ್ರ ಕಾರ್ಮಿಕವರ್ಗ, ಬಡ-ಮಧ್ಯಮ ವರ್ಗದ ರೈತರ ಬೆಂಬಲದಿಂದ, ಝಾರಶಾಹಿಯನ್ನು, ಅವನ ಆಡಳಿತೆಯನ್ನು, ಅವನ ಪ್ರಭುತ್ವವನ್ನು ಪುಡಿಮಾಡಿ ಜಗತ್ತಿನಲ್ಲಿಯೇ ಪ್ರಥಮ ಸಮತಾವಾದಿ ರಾಜ್ಯವನ್ನು ಸ್ಥಾಪಿಸಿದ ದಿವ. ರಶ್ಯಾದೇಶದ ಅರಸನಾದ ಝಾರ ಆ ದಿವಸ ಕಾರ್ಮಿಕ ವರ್ಗದ ಪಕ್ಷಕ್ಕೆ, ಕಮ್ಯುನಿಸ್ಟ್ ಪಾರ್ಟಿಗೆ ಅಧಿಕಾರವನ್ನು ಹಸ್ತಾಂತರ ಮಾಡಿದ್ದಲ್ಲ. ರಶ್ಯಾ ದೇಶದ ಕಾರ್ಮಿಕ ವರ್ಗ, ಬಡ ರೈತರ ಬೆಂಬಲದಿಂದ ಶಸ್ತ್ರಧಾರಿಗಳಾಗಿ ಲೆನಿನ್ನರ ಮುಂದಾಳುತ್ವದಲ್ಲಿ ಝಾರನ ಕೈಯಿಂದ ಅಧಿಕಾರ ಕಸಿದುಕೊಂಡ ದಿನ ಕ್ರಾಂತಿ ಮಾಡಿ ರಾಜಸತ್ತೆಯನ್ನು ಕಸಿದುಕೊಂಡ ದಿನ ಝಾರನ ರಾಜಕೀಯ, ನ್ಯಾಯಾಂಗ, ಆರ್ಥಿಕ ಪದ್ಧತಿ ಆಡಳಿತೆ, ಸೈನ್ಯಗಳನ್ನೆಲ್ಲ ಸೋಲಿಸಿ, ಅವುಗಳನ್ನೆಲ್ಲ ನಾಶಮಾಡಿ, ಅವುಗಳ ಸ್ಥಾನದಲ್ಲಿ ಮಾರ್ಕ್ಸ್‌ವಾದ - ಲೆನಿನ್ ವಾದ ಸಿದ್ಧಾಂತದ ಹೊಸ ರಾಜ್ಯ, ನೂತನ ಆರ್ಥಿಕ, ರಾಜಕೀಯ, ಸಾಮಾಜಿಕ ನೀತಿಯನ್ನು, ನವೀನ ಶಾಸಕಾಂಗ, ನ್ಯಾಯಾಂಗವನ್ನೂ ಅನುಷ್ಠಾನದಲ್ಲಿ ತಂದು ರಶ್ಯಾ ದೇಶದ ಸಮಗ್ರ ಭೂಮಿ, ಕಾರ್ಖಾನೆ, ಆಸ್ತಿಗಳೆಲ್ಲ—ಅಂದರೆ ಉತ್ಪಾದನಾ ಸಾಧನಗಳೆಲ್ಲ ಸಮಾಜದ ಸೊತ್ತನ್ನಾಗಿ ಪರಿವರ್ತಿಸಿ ದುಡಿಯುವ ಜನತೆಯ ಸಾರ್ವಭೌಮತ್ವವನ್ನು ಸ್ಥಾಪಿಸಿದ ಮಹಾದಿನ ಅದಾಗಿತ್ತು. ಕಮ್ಯುನಿಸ್ಟ್ ಪಾರ್ಟಿಯ ನೇತೃತ್ವದ ಸಶಸ್ತ್ರ ಕ್ರಾಂತಿಯಿಂದಾಗಿ ರಶ್ಯಾ ದೇಶದಲ್ಲಿ ಅಸ್ತಿತ್ವದಲ್ಲಿದ್ದ ರಾಜ್ಯಾಂಗ ಕಾರ್ಯಾಂಗ, ನ್ಯಾಯಾಂಗಗಳೆಲ್ಲ ಸಂಪೂರ್ಣ ನಾಶಗೊಂಡು, ಅದರ ಸ್ಥಾನದಲ್ಲಿ ಸಮತಾವಾದಿ ಸಿದ್ಧಾಂತದ, ರಾಜ್ಯಾಂಗ, ನ್ಯಾಯಾಂಗ, ಕಾರ್ಯಾಂಗಗಳು ಸ್ಥಾಪಿಸಲ್ಪಟ್ಟವು. ಇಡೀ ಜಗತ್ತಿನ ದುಡಿಯುವ ಜಗತ್ತಿಗೆ ಯಾವ ರೀತಿ ಶೋಷಣೆ ರಹಿತ ಸಮಾಜ ಕಟ್ಟಬಹುದೆಂದು ದಾರಿ ತೋರಿಸಿಕೊಟ್ಟಿದೆ. ಆ ಹಿಂದೆ ಜಗತ್ತಿನ ಹಲವಾರು ದೇಶಗಳಲ್ಲಿ ಸಂಭವಿಸಿದ ಕ್ರಾಂತಿಗೂ ರಷ್ಯಾದೇಶದಲ್ಲಿ ನವೆಂಬರ್ 7, 1917 ರಂದು ನಡೆದ ಕ್ರಾಂತಿಗೂ ಇರುವ ಮೂಲಭೂತ ವ್ಯತ್ಯಾಸ ಅದೇ ಆಗಿದೆ.

ಸ್ವಾತಂತ್ರ್ಯ ಚಳವಳಿ :

ಉಪ್ಪು ಸತ್ಯಾಗ್ರಹ, ವಿದೇಶೀ ಬಟ್ಟೆಗಳಿಗೆ ಬಹಿಷ್ಕಾರ, ಕರನಿರಾಕರಣೆ ಚಳುವಳಿ, ವೈಯ್ಯಕ್ತಿಕ ಸತ್ಯಾಗ್ರಹ—ಉಪವಾಸ ಸತ್ಯಾಗ್ರಹ, ಮಹಾತ್ಮಾ ಗಾಂಧಿಯವರ ಆಮರಣ ಉಪವಾಸ ಹೀಗೆ ಹಲವಾರು ರೀತಿಯ ಚಳುವಳಿ ಕ್ರಮಗಳಿಂದ ಬ್ರಿಟಿಷರನ್ನು ಹೊಡೆದೋಡಿಸಲು ಸಾಧ್ಯವಾಗಲಾರದಾದಾಗ. 1940 ಆಗಸ್ಟ್ 9ರಂದು "ಕ್ವಿಟ್ ಇಂಡಿಯಾ" "ಭಾರತದಿಂದ ತೊಲಗಿರಿ" ಎಂಬ ಘೋಷಣೆಯನ್ನು ಗಾಂಧಿಯವರು ಸಾರಬೇಕಾಯಿತು. ಅಹಿಂಸೆಯಿಂದಲೇ ಸ್ವರಾಜ್ಯಗಳಿಸುತ್ತೇನೆಂದು ಸಾರುತ್ತಲೇ ಬಂದಿದ್ದ, ಹಲವಾರು ರೂಪದ ಹೋರಾಟಗಳಲ್ಲೂ ಹಾಗೆಯೇ ತಾನು ಉಪವಾಸ ಕೈಗೊಂಡಾಗಲೂ, ಬಹಳಷ್ಟು ಸಲ ಜನತೆ ಹಿಂಸಾಚಾರ ಮಾಡಿದಾಗ, ಪೋಲೀಸರ, ಮಿಲಿಟರಿಯ ಅತ್ಯಾಚಾರವನ್ನು ಧೈರ್ಯದಿಂದ ಎದುರಿಸಿದಾಗ, ಹಿಂಸೆಯಿಂದಲೇ ಅವರಿಗೆ ಉತ್ತರ ನೀಡಿದಾಗ, ಭೀತಿಗೊಂಡ ಮಹಾತ್ಮಾ ಗಾಂಧಿಯವರು ಅಂಥ ಘಟನೆಗಳನ್ನು ಖಂಡಿಸಿದ್ದಷ್ಟೇ ಅಲ್ಲ, ಕೆಲವು ಸಲ ಅಂಥ ಹಿಂಸಾಕೃತ್ಯಗಳು ನಡೆದಾಗ, ಅದರ ವಿರುದ್ಧ ಉಪವಾಸ ಕೈಗೊಂಡ ಘಟನೆಗಳೂ ಸಾಕಷ್ಟಿವೆ. ಆದರೆ "ಕ್ವಿಟ್ ಇಂಡಿಯಾ" ಚಳುವಳಿಯ ಕರೆ ಕೊಟ್ಟಾಗ, ಮಹಾತ್ಮಾ ಗಾಂಧಿಯವರ ನೇತೃತ್ವದಲ್ಲಿಯೇ, ಅವರ "ಅಹಿಂಸಾತ್ಮಕ ಪರಂಪರೆ" ಯರೀತಿಯೇ ಚಳುವಳಿ ನಡೆಸಲು ಒಪ್ಪಲಿಲ್ಲ. ವೈಯ್ಯಕ್ತಿಕ ಸತ್ಯಾಗ್ರಹ, ಉಪವಾಸ, ಶಾಂತಿಯುತ ಚಳುವಳಿಗಳಿಂದ ಬೇಸತ್ತ ಜನತೆ, ರಶ್ಯಾ ದೇಶದ ಕ್ರಾಂತಿ, ಆಂಧ್ರ, ಬಂಗಾಲ, ಮಹಾರಾಷ್ಟ್ರ, ಕೇರಳ, ಪಂಜಾಬ್ ಪ್ರಾಂತಗಳಲ್ಲಿ ರೈತರೂ, ಕಾರ್ಮಿಕರೂ ನಡೆಸುತ್ತಿದ್ದ ಹೋರಾಟಗಳಿಂದ ಸ್ಫೂರ್ತಿಗೊಂಡು, ಅಹಿಂಸಾತ್ಮಕ ನೀತಿ ನಿರೂಪಣೆಯನ್ನು ಬಿಟ್ಟುಕೊಟ್ಟು, ಬೇರೆ ದಾರಿಯಲ್ಲಿ ಧುಮುಕಿದರು. ರೈಲ್ವೇ ಸ್ಟೇಶನ್, ಪೋಲೀಸ್ ಠಾಣೆ, ಪೋಸ್ಟ್ ಆಫೀಸ್‌ಗಳ ಮೇಲೆ ಆಕ್ರಮಣ, ಬೆಂಕಿ ಹಚ್ಚುವುದು, ರೈಲ್ವೇ ಹಳಿ ಕೀಳುವುದು, ಪೋಲೀಸ್, ಮಿಲಿಟರಿಯವರಿಂದ ಪಿಸ್ತೂಲ್-ಬಂದೂಕು ಕಸಿದುಕೊಳ್ಳುವುದು, ಮುಂತಾದ ಘಟನೆಗಳು ನಡೆದವು.

ಎರಡನೇ ಮಹಾಯುದ್ಧ :

ಅದೇ ಸಮಯದಲ್ಲಿ ಎರಡನೇ ಮಹಾಯುದ್ಧ ಪ್ರಾರಂಭವಾಯಿತು. 1930ರಿಂದಲೇ ಜಗತ್ತಿನ ಸಾಮ್ರಾಜ್ಯಶಾಹಿ ದೇಶಗಳನ್ನು ಭೀಕರ ಆರ್ಥಿಕ ಬಿಕ್ಕಟ್ಟು ಆವರಿಸಿತ್ತು. ನಿರುದ್ಯೋಗ ಪೆಡಂಭೂತವಾಗಿ ಬೆಳೆದಿತ್ತು. ಬಂಡವಾಳಶಾಹಿ ದೇಶಗಳೊಳಗೆ ಭೀಕರ ಪೈಪೋಟಿ ನಡೆಯುತ್ತಿತ್ತು. ಜರ್ಮನಿಯಲ್ಲಿ ಕುಸಿಯುತ್ತಿದ್ದ ಆರ್ಥಿಕ ಬಿಕ್ಕಟ್ಟಿನ ದುರುಪಯೋಗ ಮಾಡಿಕೊಂಡ ಹಿಟ್ಲರ್, 1933ರಲ್ಲಿ ನಡೆದ ಚುನಾವಣೆಯಲ್ಲಿ ಅಧಿಕಾರಕ್ಕೆ ಬಂದ. ಅಲ್ಲಿ ಕಮ್ಯುನಿಸ್ಟ್ ಪಾರ್ಟಿ ಕೂಡ ಅಷ್ಟೇ ಬಲಿಷ್ಠವಾಗಿತ್ತು. ಕಮ್ಯುನಿಸ್ಟ್ ಪಾರ್ಟಿ ಮೇಲೆ ಸುಳ್ಳು ಆರೋಪ ಹೊರಿಸಿ ಅದರ ಮೇಲೆ ಪ್ರತಿಬಂಧ ಹೇರಿ, ಪಾರ್ಟಿಯ ಮುಖಂಡರನ್ನೂ, ಸದಸ್ಯರನ್ನೂ ಬಂದಿಸಿದ. ಜರ್ಮನಿಯ ಆರ್ಥಿಕ ನೀತಿಯನ್ನು ಯುದ್ಧ ತಯಾರಿಯತ್ತ ತಿರುಗಿಸಿದ. ಯುದ್ಧಕ್ಕೆ ಬೇಕಾದ ಶಸ್ತ್ರಾಸ್ತ್ರ, ಟ್ಯಾಂಕ್, ಮತ್ತಿನ್ನಿತರ ಅವಶ್ಯಕತೆಗಳ ತಯಾರಿಯಾಗಬೇಕಾದರೆ, ಹೊಸ ಕಾರ್ಖಾನೆಗಳ ಸ್ಥಾಪನೆಯಾಗಬೇಕು, ಯುದ್ಧಕ್ಕೆ ಆಧುನಿಕ ಸೈನ್ಯ ಬೇಕು, ಈ ಎರಡು ಕಾರ್ಯಗಳಿಂದ ಜರ್ಮನಿಯ ನಿರುದ್ಯೋಗ ಸಮಸ್ಯೆ ಪರಿಹರಿಸಲು ಮುಂದಾದ ಜರ್ಮನಿಯಲ್ಲಿ ಹಿಟ್ಲರನ ಶಕ್ತಿ ಬೆಳೆಯಿತು. ತನ್ನ ಸಾಮ್ರಾಜ್ಯ ಬೆಳೆಸಬೇಕು. ಅದಕ್ಕಾಗಿ ಯುದ್ಧ ನಡೆಯಬೇಕು. ಆ ಸಮಯದಲ್ಲಿ ಬ್ರಿಟಿಷ್ ಸಾಮ್ರಾಜ್ಯ ಕುಸಿಯುತ್ತ ಬಂದಿತ್ತು. ಮೊದಲು ಇಂಗ್ಲೆಂಡನ್ನು ವಶಪಡಿಸಿಕೊಂಡು ಅನಂತರ ಸೋವಿಯತ್ ರಶ್ಯಾದ ಮೇಲೆ ಆಕ್ರಮಣ ಮಾಡುವ ವಿಚಾರದಲ್ಲಿದ್ದ ಹಿಟ್ಲರ್. ಇಂಗ್ಲೆಂಡಿನ ಮೇಲೆ ನಡೆಸಿದ ಆಕ್ರಮಣ ಯಶಸ್ವಿಯಾಗಲಾರದಾದಾಗ, ರಶ್ಯಾ ದೇಶದ ಮೇಲೆ ಆಕ್ರಮಣ ಪ್ರಾರಂಭಿಸಿದ.

ಭಾರತದಲ್ಲಿ ಬಂಧನ :

ಎರಡನೇ ಮಹಾಯುದ್ಧ ಪ್ರಾರಂಭವಾದ ಕೂಡಲೇ ಭಾರತ ದೇಶದ ಬ್ರಿಟಿಷ್ ಸರಕಾರ ಕಮ್ಯುನಿಷ್ಟರನೆಲ್ಲ ಹಿಡಿದು ಬಂಧಿಸಿತು. 1940, ಮೇ ತಿಂಗಳಲ್ಲಿ ದೇಶಾದ್ಯಂತ ಹಿರಿಯ ಕಮ್ಯುನಿಸ್ಟ್ ಮುಖಂಡರ ಬಂಧನವಾಯಿತು. ಮುಂಬಯಿಯಲ್ಲಿದ್ದ ಜಪಾನಿನ ಕಂಪೆನಿ ಮಿಟ್ಸುಬೂಶಾನ ಕೈಸಾದಲ್ಲಿ ಅಕೌಂಟರಾಗಿಕೆಲಸ ಮಾಡುತ್ತಿದ್ದು, ಕಮ್ಯುನಿಸ್ಟ್ ಪಾರ್ಟಿಯ ಮುಖಂಡರಾಗಿದ್ದ ಎನ್. ಎಲ್. ಉಪಾಧ್ಯಾಯರೂ ಅಂದು ಬಂಧನಕ್ಕೊಳಗಾದವರಲ್ಲೊಬ್ಬರು.

ನವಂಬರ್ 7ರ ರಶ್ಯಾ ಮಹಾಕ್ರಾಂತಿಯ ದಿನಾಚರಣೆಗೆ ತಯಾರಿ ಮಾಡುವ ಜವಾಬ್ದಾರಿ ಎಲ್ಲಾ ಚಿಕ್ಕ ವಯಸ್ಸಿನ ನಮ್ಮ ತಲೆಯ ಮೇಲೆ ಬಿದ್ದಿತ್ತು. ನವಂಬರ್ 6 ರಂದು ಮುಂಬಯಿ ಕೆನೆಡಿ ಬ್ರಿಜ್ಜಿನ ಕೋಣೆಯೊಂದರಲ್ಲಿ ಕರಪತ್ರ, ಪೋಸ್ಟರುಗಳನ್ನೆಲ್ಲ ತಯಾರಿಸಿ ಮುಂಬಯಿ ನಗರದಲ್ಲಿಹಂಚುವ ಸಲುವಾಗಿತಯಾರಿಯಲ್ಲಿದ್ದಾಗಬೈಗುಂಮುಂಜಾನೆ 4ಘಂಟೆಗೆ ಆರು ಯುವಕರ ಜೊತೆಯಲ್ಲಿನನ್ನನ್ನು ಬಂಧಿಸಿ, ನಮ್ಮ ಹಿರಿಯ ಮುಖಂಡರಿದ್ದ ನಾಸಿಕ ಜೈಲಿಗೆ ಕರೆದೊಯ್ಯಲಾಯಿತು. ನವಂಬರ್ 1940 ರಿಂದ ಮೇ 1942ರ ವರೆಗೆ ನಾಸಿಕ್ ಜೈಲಿನಲ್ಲಿ ಮಾರ್ಕ್ಸ್‌ವಾದದ ಅಭ್ಯಾಸ ಮಾಡಲು ಒಳ್ಳೆಯ ಅವಕಾಶ ಸಿಕ್ಕಿತು ಮುಂಜಾನೆ 200 ಕಾಮ್ರೇಡ್ಸ್‌ರಿಗೆ ಶಾರೀರಿಕ ಶಿಕ್ಷಣ (ಪಿ. ಟಿ.) ಕೊಡಿಸುವ ಜವಾಬ್ದಾರಿ ನನ್ನ ಮೇಲೆ ಬಿತ್ತು. ಜೈಲಿನ ಮಂತ್ರಿ ಮಂಡಲದಲ್ಲಿ ನಾನು ಆಹಾರ ಮಂತ್ರಿಯಾಗಿದ್ದೆ. ವಾರಕ್ಕೊಂದು ಸಲ ನನ್ನ ಪಾಳಿ ಬಂದಾಗ ಕರ್ನಾಟಕದ ಆಹಾರದ ರುಚಿ ಎಲ್ಲರಿಗೂ ಒದಗಿಸುವಂತೆ ಮಾಡುತ್ತಿದ್ದೆ. ಮುಂಜಾನೆ 9 ರಿಂದ 11 ರವರೆಗೆ ಅಜಯಘೋಷ್ ಮೊದಲಾದವರು ಕ್ಲಾಸ್ ನಡೆಸುತ್ತಿದ್ದರು. ಸಾಯಂಕಾಲ ಆಟಗಳಲ್ಲಿ ಮಗ್ನರಾಗಿರುತ್ತಿದ್ದೆವು. ಮೇ ದಿನಾಚರಣೆ, ರಶ್ಯದ ಕ್ರಾಂತಿ ದಿನಾಚರಣೆಯ ದಿವಸಗಳಲ್ಲಿ ನಾಟಕ, ಹಾಡು, ಆಟಗಳು ನಡೆಯುತ್ತಿದ್ದವು. ಇಂಗ್ಲಿಷ್ ನಾಟಕಗಳಲ್ಲಿ ಪಾತ್ರಧಾರಿಯಾಗುವ, ಟೆನ್ನಿಸ್, ಬ್ಯಾಡ್ಮಿಂಟನ್ ಆಟಗಳಲ್ಲಿ ಬಕ್ಷೀಸ್ ಪಡೆಯುವ ಅವಕಾಶವೂ ಸಿಗುತ್ತಿತ್ತು. 1941ರಲ್ಲಿ ನನ್ನನ್ನೊಳಗೊಂಡು 8 ಜನರಿಗೆ ಪಾರ್ಟಿ ಸದಸ್ಯತ್ವ ಒದಗಿಸಲಾಯಿತು. ಪ್ರಾರಂಭದಲ್ಲಿ ಚಿಕ್ಕ ವಯಸ್ಸಿನ ನಮಗೆಲ್ಲ ಪಾರ್ಟಿ ಸದಸ್ಯತ್ವದ ಮಹತ್ವ ನಮಗೆ ತಿಳಿಯಲಿಲ್ಲ ಕೆಲವು ದಿವಸಗಳ ನಂತರ ಜೈಲಿನಲ್ಲಿದ್ದ ಪಾರ್ಟಿ ಕಮಿಟಿಗಳ ವರದಿ ಕೇಳುವಲ್ಲಿ ನಾವು ಪಾಲುಗಾರರಾದಾಗ ಕ್ರಾಂತಿಕಾರಿ ಪಕ್ಷದ ಸದಸ್ಯತ್ವದ ಅರಿವು ನಮಗಾಯಿತು. ಹೊರಗಿನ ಪಾರ್ಟಿ ಕೇಂದ್ರದಿಂದ ರಾಜಕೀಯ ಬೆಳವಣಿಗೆ, ಪಾರ್ಟಿಯ ನಿಲುವುಗಳ ಕುರಿತು ಜೈಲಿಗೆ ವರದಿಗಳು ಗುಪ್ತವಾಗಿ ಬರುತ್ತಿದ್ದವು. ಜೈಲು ಪಾರ್ಟಿ ಕಮಿಟಿಯವರು ಅವುಗಳನ್ನೆಲ್ಲ ಚರ್ಚೆಮಾಡಿ ನಮಗೆಲ್ಲ ವರದಿಮಾಡುತ್ತಿದ್ದರು. ನನ್ನ ಎಳೆವಯಸ್ಸಿನಲ್ಲಿ ನಾಸಿಕ್ ಜೈಲುವಾಸ ಹೊಸ ದಾರಿದೀಪ ತೋರಿಸಿತು.

ಸುಲಭವಾಗಿ ಇಂಗ್ಲೆಂಡನ್ನು ವಶಪಡಿಸಿಕೊಳ್ಳಬಹುದೆಂದು ತಿಳಿದಿದ್ದ ಹಿಟ್ಲರನಿಗೆ ಬ್ರಿಟಿಷ್‌ರ ಜನತೆ ನಿರಾಶೆಯನ್ನುಂಟುಮಾಡಿದರು. ಕಮ್ಯುನಿಸಂನ್ನೂ, ಸೋವಿಯತ್ ದೇಶವನ್ನು ನಾಶಮಾಡಬೇಕೆಂಬ ಗುರಿಯಿಂದಲೇ ಯುದ್ಧ ತಯಾರಿ ನಡೆಸಿದ್ದ ಹಿಟ್ಲರ್ ಇಂಗ್ಲೆಂಡಿನಲ್ಲಿ ಸುಲಭವಾಗಿ ಜಯಸಿಗಲಾರದಾದಾಗ ರಶ್ಯಾ ದೇಶದ ಮೇಲೆ ಆಕ್ರಮಣ ಮಾಡಿದ. ಇದು ಜಗತ್ತಿನ ರಾಜಕೀಯ ಶಕ್ತಿಗಳಲ್ಲಿ ಹೊಸ ಹೊಂದಾಣಿಕೆ ಬರುವಂತೆ ಮಾಡಿತು. ಇಡೀ ಜಗತ್ತನ್ನೇ ವಶಪಡಿಸಿಕೊಳ್ಳಬೇಕೆಂಬ ಉದ್ದೇಶದಿಂದ ಜರ್ಮನಿಯ ಹಿಟ್ಲರ್, ಜಪಾನಿನ ಟೋಜೋ, ಇಟಲಿಯ ಮುಸೋಲಿನಿ ಜೊತೆಯಲ್ಲಿಯೇ ಆಕ್ರಮಣ ಮುಂದುವರಿಸಿದ. ಮಾನವಕೋಟಿಯ ಮೇಲೆ ಈ ನಾಝಿ ಆಕ್ರಮಣದಿಂದ ಉಂಟಾಗಬಹುದಾದ ಕೆಟ್ಟ ಪರಿಣಾಮದ ಅರಿವನ್ನು ತಿಳಿದುಕೊಂಡು ಇಂಗ್ಲೆಂಡಿನ ಪ್ರಧಾನ ಮಂತ್ರಿ ಚರ್ಚಿಲ್ ಅಮೇರಿಕದ ಅಧ್ಯಕ್ಷ ರೂಜ್‌ವೆಲ್ಟ್‌ರು, ಸೋವಿಯತ್ ರಷ್ಯಾದ ಪ್ರಧಾನಿ ಮತ್ತು ಸೇನಾ ನಾಯಕ ಸ್ಟ್ಯಾಲಿನ್ ಅವರ ಜೊತೆ ಸೇರಿ ನಾಝಿಸಂ ವಿರುದ್ಧ ಹೋರಾಟ ನಡೆಸಿದರು.

ಹೊಸ ಪರಿಸ್ಥಿತಿ :

ಸೋವಿಯತ್ ದೇಶದ ಮೇಲೆ ಹಿಟ್ಲರ್ ಆಕ್ರಮಣ ನಡೆಸಿದ ನಂತರ ಭಾರತ ಕಮ್ಯುನಿಸ್ಟ್ ಪಾರ್ಟಿಯಲ್ಲಿ ವಿಚಾರ ಮಂಥನ ನಡೆದು "ಯುದ್ಧ ವಿರೋಧಿ"ಯಾಗಿದ್ದ-ನಿಲುವೆಯನ್ನು ಬದಲಾಯಿಸಿ "ಜನತೆಯ ಯುದ್ಧ" ವಾಗಿ ಪರಿವರ್ತಿಸಲಾಯಿತು. ಯಾಕೆಂದರೆ ಎರಡು ಸಾಮ್ರಾಜ್ಯಶಾಹಿಗಳೊಳಗೆ ಯುದ್ಧ ನಡೆದಾಗ ಜಗತ್ತಿನ ಶಾಂತಿ ಕಾಪಾಡಲು ಯುದ್ಧವನ್ನು ವಿರೋಧಿಸುವ ನಿಲುವು ತಾಳಲಾಗಿತ್ತು. ಜಗತ್ತಿನ ಏಕೈಕ ಕಮ್ಯುನಿಸ್ಟ್ ರಾಷ್ಟ್ರವಾದ ಸೋವಿಯತ್ ದೇಶವನ್ನೇ ನಾಶಮಾಡಲು ಹಿಟ್ಲರ್ ಆ ದೇಶದ ಮೇಲೆ ಯುದ್ಧ ಹೂಡಿದಾಗ, ಸಮತಾವಾದಿ ದೇಶವನ್ನು—ರಕ್ಷಿಸುವ ಜವಾಬ್ದಾರಿ ಜಗತ್ತಿನ ಪ್ರತಿಯೊಂದು ಕಮ್ಯುನಿಸ್ಟ್ ಪಾರ್ಟಿಯ, ಕಾರ್ಮಿಕ ವರ್ಗದ ಕರ್ತವ್ಯವಾಗಿರುವುದರಿಂದ ಭಾರತ ಕಮ್ಯುನಿಸ್ಟ್ ಪಾರ್ಟಿ ಕೂಡ ತನ್ನ ಯುದ್ಧ ವಿರೋಧಿ ನೀತಿಯನ್ನು ಬದಲಾಯಿಸಿ, ನಾಝಿ ಶಕ್ತಿಯನ್ನು ಸೋಲಿಸಲು ಮಿತ್ರ ರಾಷ್ಟ್ರಗಳಿಗೆ ಸಹಾಯ ಮಾಡುವುದು ಪರಮ ಕರ್ತವ್ಯವೆಂದು ಭಾವಿಸಿತು.

ಹೊಸ ಪರಿಸ್ಥಿತಿಯಲ್ಲಿ ಹೊಸ ನಿಲುವನ್ನು ಕಮ್ಯುನಿಸ್ಟ್ ಪಾರ್ಟಿ ಸ್ವೀಕರಿಸಿದ ಕೆಲವೇ ತಿಂಗಳಲ್ಲಿ ದೇಶಾದ್ಯಂತ ಬಂಧನದಲ್ಲಿದ್ದ ಕಮ್ಯುನಿಸ್ಟರ ಬಿಡುಗಡೆ ಪ್ರಾರಂಭವಾಯಿತು. 1942ರ ಮೇ ತಿಂಗಳಲ್ಲಿ ನನ್ನನ್ನೊಳಗೊಂಡು ಕಿರಿಯ ಕಮ್ಯುನಿಸ್ಟರ ಬಿಡುಗಡೆಯಾಯಿತು. ಆ ಸಮಯದಲ್ಲಿ ಜಪಾನ್ ಸೈನ್ಯ ಬರ್ಮಾ, ಮಲೇಶಿಯಾ, ಸಿಂಗಪೂರ್‌ಗಳ ಮೂಲಕ ಭಾರತದ ಮೇಲೂ ಆಕ್ರಮಣ ನಡೆಸಬಹುದೆಂಬ ಭೀತಿಯಿದ್ದುದರಿಂದ, ಜಪಾನಿನ ಸೈನ್ಯ ಗೆರಿಲ್ಲಾ ಯುದ್ಧದ ತಂತ್ರ ನಡೆಸುತ್ತಿದ್ದುದರಿಂದ ಅದನ್ನೆದುರಿಸುವ ಸಲುವಾಗಿ ನಮ್ಮ ಪಾರ್ಟಿ ಕಾರ್ಯಕರ್ತರನ್ನೆಲ್ಲ ಸಿದ್ಧಗೊಳಿಸಬೇಕೆಂಬ ಉದ್ದೇಶದಿಂದ ನನ್ನನ್ನೊಳಗೊಂಡು ಕೆಲವರಿಗೆ ಗೆರಿಲ್ಲಾ ಯುದ್ಧದ ತರಬೇತಿಗೊಳಿಸಲಾಯಿತು. ಮಂಗಳೂರು, ಬೆಂಗಳೂರಿನಲ್ಲಿ ನಾನು ನಮ್ಮ ಪಾರ್ಟಿಯವರಿಗೆ ಗೆರಿಲ್ಲಾ ಯುದ್ಧದ ತರಬೇತಿ ಕೊಟ್ಟೆ.

1942 ಆಗಸ್ಟ್ 9ರಂದು ಮುಂಬಯಿಯಲ್ಲಿ ಚಲೇಜಾವೋ ದಿನಾಚರಣೆ ಅಂಗವಾಗಿ ದೊಡ್ಡ ಚಳುವಳಿ ನಡೆಯಿತು. ಪೋಲೀಸರ ಪ್ರತಿಬಂಧ

(7ನೇ ಪುಟ ನೋಡಿ)

ರಾಷ್ಟ್ರೀಯ ಶಿಕ್ಷಣದ ಸಮಸ್ಯೆಗಳು

ನಿರ್ಮಲ್ ಬೋಸ್

ಕರ್ನಾಟಕದಲ್ಲಿ ಒಂದು ಸಮಗ್ರ ಶಿಕ್ಷಣ ಮಸೂದೆಬೇಕೆಂಬ ಒತ್ತಾಯ ಬಂದಾಗ, ಅಂಥ ಮಸೂದೆ ತರಲಾಗುವುದೆಂದು ಶಿಕ್ಷಣ ಮಂತ್ರಿಯವರು ಹೋದ ವಿಧಾನ ಸಭೆಯಲ್ಲಿ ಆಶ್ವಾಸನೆ ನೀಡಿದ್ದರು. ಅದಕ್ಕನುಸಾರವಾಗಿ ಕರಡು ಶಿಕ್ಷಣ ಮಸೂದೆ ಸಾರ್ವಜನಿಕರ ಅಭಿಪ್ರಾಯದ ಸಲುವಾಗಿ ಬಿಡುಗಡೆ ಮಾಡಲಾಗಿದೆ. ಸದ್ಯದಲ್ಲಿಯೇ ಅದು ವಿಧಾನಸಭೆಯಲ್ಲಿ ಚರ್ಚೆಗೆ ಬರಲಿದೆ. ಆ ಚರ್ಚೆಗೆ ಸಹಾಯವಾಗಲೆಂಬ ಉದ್ದೇಶದಿಂದ, ಪಶ್ಚಿಮ ಬಂಗಾಲದ ಎಡರಂಗ ಸರಕಾರದ ಸಹಕಾರ ಮಂತ್ರಿಗಳಾದ ನಿರ್ಮಲ ಬೋಸ ಅವರು, ವಿಶಾಖಪಟ್ಟಣದಲ್ಲಿ ಸೇರಿದ್ದ 57ನೆಯ ಅಖಿಲ ಭಾರತ ಶಿಕ್ಷಣ ಸಮ್ಮೇಳನದಲ್ಲಿ ಮಾಡಿದ ಉದ್ಘಾಟನಾ ಭಾಷಣವನ್ನು ಐಕ್ಯರಂಗ ಓದುಗರ ಸಲುವಾಗಿ ಪ್ರಕಟಿಸುತ್ತಿದ್ದೇವೆ.

ಸಂಪಾದಕ ಮಂಡಲಿ.

ನಮ್ಮ ರಾಷ್ಟ್ರವನ್ನು ಕಟ್ಟುವ ಕಾರ್ಯದಲ್ಲಿರುವ ಅತಿ ದೊಡ್ಡ ಕೊರತೆ ಯಾವುದೆಂದರೆ ಇಂದಿನ ತನಕ ಶಿಕ್ಷಣದ ಸಲುವಾಗಿ ಅತಿ ಕಡಿಮೆ ಪ್ರಾಶಸ್ತ್ಯ ಕೊಟ್ಟಿರುವುದಾಗಿರುತ್ತದೆ. ನಮ್ಮ ಐದನೆಯ ಪಂಚವಾರ್ಷಿಕ ಯೋಜನೆಯಲ್ಲಿ ನಾವು ಒಕ್ಕಲುತನ ಮತ್ತು ಕೈಗಾರಿಕೆಗಳಿಗೆ ಪ್ರಾಶಸ್ತ್ಯ ಕೊಟ್ಟಿರುತ್ತೇವೆ ನಿಜ ಆದರೆ ಶಿಕ್ಷಣಕ್ಕೆ ಗಮನ ಕೊಡದಿದ್ದರೆ ಅವು ಹೇಳಿಕೊಳ್ಳುವಂತೆ ಪ್ರಗತಿ ಸಾಧಿಸಲು ಶಕ್ಯವಿಲ್ಲ. ಕೈಗಾರಿಕೆ ಮತ್ತು ಒಕ್ಕಲುತನ ಬೆಳೆಯಬೇಕಾದರೆ ಎಲ್ಲರಿಗೂ ಪ್ರಾಥಮಿಕ ಶಿಕ್ಷಣವನ್ನು, ಹಾಗೆಯೇ ಇವುಗಳಿಗೆ ಸಂಬಂಧಿಸಿದ ಮತ್ತು ಉತ್ಪಾದನೆಗೆ ಸಂಬಂಧಿಸಿದ ಕಾರ್ಯಕ್ರಮಗಳಿಗೆ ಅವಶ್ಯಕವಾದ ತಾಂತ್ರಿಕ ಶಿಕ್ಷಣವನ್ನು ಅಭಿವೃದ್ಧಿಗೊಳಿಸುವುದು ಅಗತ್ಯ. ಈ ಕಾರಣದಿಂದಲೇ 7ನೇ ಪಂಚವಾರ್ಷಿಕ ಯೋಜನೆಯಲ್ಲಿ ಶಿಕ್ಷಣಕ್ಕೆ ಅತಿ ಹೆಚ್ಚಿನ ಪ್ರಾಧಾನ್ಯ ಕೊಡಬೇಕೆಂದು ಇತ್ತೀಚೆಗೆ ನಡೆದ ಶಿಕ್ಷಣಕ್ಕೆ ಸಂಬಂಧಿಸಿದ ಕೇಂದ್ರ ಎಡ್ವೈಸರಿ ಬೋರ್ಡಿನಲ್ಲಿ ನಿರ್ಣಯ ಕೈಗೊಳ್ಳಲಾಗಿತ್ತು.

ಮುಂದಿನ 5ನೆಯ ಪಂಚವಾರ್ಷಿಕ ಯೋಜನೆಯಲ್ಲಿ (ಅದರ ಕೆಲಸ ಈಗಾಗಲೇ ಪ್ರಾರಂಭವಾಗಿದೆ) ಶಿಕ್ಷಣ ಅತಿ ಹೆಚ್ಚಿನ ಪ್ರಾಧಾನ್ಯ ಪಡೆಯಬೇಕಾದರೆ ಕೆಲವು ಕಾರ್ಯಗಳನ್ನು ಮಾಡಲೇಬೇಕು. ಮೊದಲನೆಯದಾಗಿ ಶಿಕ್ಷಣ ಪಡೆಯುವುದು ನಾಗರೀಕರ ಮೂಲಭೂತ ಹಕ್ಕು ಎಂಬುದನ್ನು ಭಾರತ ದೇಶದ ಸಂವಿಧಾನದಲ್ಲಿ ಸೇರಿಸಬೇಕು, ಇದರ ಸಲುವಾಗಿ ಸಂವಿಧಾನದಲ್ಲಿ ತಿದ್ದುಪಡಿ ಮಾಡಬೇಕು. ಎರಡನೆಯದಾಗಿ ಹೆಚ್ಚು ಹಣ ಒದಗಿಸುವ ಸಲುವಾಗಿ ಹಣಕಾಸು ವಿಭಾಗದಲ್ಲಿ ಮತ್ತು ಅದು ಮುಖ್ಯ ಉದ್ದೇಶವೆಂದು ಏಳನೆಯ ಪಂಚವಾರ್ಷಿಕ ಯೋಜನೆಯಲ್ಲಿ ಶಿಕ್ಷಣಕ್ಕೆ ಪ್ರಮುಖ ಖಾತೆಯ ಸ್ಥಾನ ಕೊಡಬೇಕು. ಮೂರನೆಯದಾಗಿ, ಒಕ್ಕೂಟದ (ಕೇಂದ್ರ) ಹಾಗೂ ರಾಜ್ಯ ಸರಕಾರಗಳು ಶಿಕ್ಷಣದ ಸಲುವಾಗಿ ಹೆಚ್ಚು ಹಣ ಖರ್ಚು ಮಾಡಬೇಕು. ಸದ್ಯ ಬಹಳಷ್ಟು ರಾಜ್ಯ ಸರಕಾರಗಳು ಶಿಕ್ಷಣದ ಸಲುವಾಗಿ ಸಮಾಧಾನಕಾರಕ ರೀತಿಯಲ್ಲಿ ಹಣ ಖರ್ಚು ಮಾಡುತ್ತಿವೆ. ಉದಾಹರಣೆಗಾಗಿ ಪಶ್ಚಿಮ ಬಂಗಾಲ ಶೇ 23% ಕೇರಳ ಶೇ41% ರಷ್ಟು ಖರ್ಚು ಮಾಡುತ್ತಿವೆ. ಆದರೆ ಕೇಂದ್ರ ಸರಕಾರ ಶಿಕ್ಷಣದ ಸಲುವಾಗಿ ಬಹಳ ಕಡಿಮೆ ಖರ್ಚು ಮಾಡುತ್ತಿದೆ, ಅಷ್ಟೇ ಅಲ್ಲ ಪ್ರತಿ ವರ್ಷ ಇದರ ಖರ್ಚು ಕಡಿಮೆಯಾಗುತ್ತ ಹೊರಟಿರುವುದು ನಿರಾಶಾದಾಯಕವಾಗಿದೆ. 1982–83ನೆಯ ಒಟ್ಟು ಬಜೆಟ್ಟಿನ ರೂ 28000 ಕೋಟಿಯಲ್ಲಿ, ಶಿಕ್ಷಣದ ಸಲುವಾಗಿ ಬರೇ ರೂ 360 ಕೋಟಿ ತೆಗೆದಿಡಲಾಗಿದೆ. 1983–84ರ ಕೇಂದ್ರದ ಒಟ್ಟು ಬಜೆಟ್ಟಿನ ರೂ. 35,000 ಕೋಟಿಯಲ್ಲಿ ರೂ 346 ಕೋಟಿ ಮಾತ್ರ ಶಿಕ್ಷಣಕ್ಕೆ. ಇದು ಶೇ 1% ಕ್ಕಿಂತಲೂ ಕಡಿಮೆಯಾಗಿದೆ.

ಬಹಳ ದಿವಸಗಳ ಹಿಂದೆ ಖೇರ್ ಕಮಿಟಿ ಶಿಫಾರಸು ಮಾಡಿದ ಪ್ರಕಾರ ಶಿಕ್ಷಣದ ಸಲುವಾಗಿ ಕಡಿಮೆಯೆಂದರೆ ಕನಿಷ್ಟ ಶೇ 10% ರಷ್ಟಾದರೂ ಖರ್ಚು ಮಾಡಬೇಕು.

ಸದ್ಯ ಶಿಕ್ಷಣದ ಸಲುವಾಗಿ ರಾಜ್ಯ ಸರಕಾರಗಳು ಖರ್ಚು ಮಾಡುತ್ತಿರುವ ಹಣಕ್ಕಿಂತ ಹೆಚ್ಚಿಗೆ ವ್ಯಯಮಾಡಲು ಅವುಗಳಿಗೆ ಸಾಧ್ಯವಿಲ್ಲ. ನಮ್ಮ ದೇಶದ ಶಿಕ್ಷಣ ರಂಗದಲ್ಲಿ ನಿಜವಾಗಿಯೂ ಸುಧಾರಣೆಯಾಗಬೇಕಾದರೆ ಕೇಂದ್ರ ಸರಕಾರ ಹೆಚ್ಚು ಹಣ ಖರ್ಚು ಮಾಡಲು ಮುಂದೆಬರಬೇಕು.

ಉಚ್ಚ ಮಟ್ಟದ ಶಿಕ್ಷಣದಲ್ಲಿ ಕೂಡ ರಾಜ್ಯ ಸರಕಾರಗಳಿಗೆ ಕೇಂದ್ರದ ಸಹಾಯ ಅತಿ ಮಹತ್ವದ ಪಾತ್ರವಹಿಸುತ್ತದೆ. ವಿಶ್ವವಿದ್ಯಾಲಯಗಳ ಸಹಾಯ ಸಮಿತಿಯು ನಮ್ಮ ದೇಶದ ವಿಶ್ವವಿದ್ಯಾಲಯಗಳಿಗೆ ನೀಡುತ್ತಿರುವ ಸಹಾಯದಲ್ಲಿ ಶೇ. 80ರಷ್ಟು ಕೇಂದ್ರ ವಿಶ್ವವಿದ್ಯಾಲಯಗಳಿಗೆ ಹೋಗುತ್ತದೆ. ಉಳಿದ 117 ರಾಜ್ಯ ವಿಶ್ವವಿದ್ಯಾಲಯಗಳಿಗೆ ಬರೇ ಶೇ.20ರಷ್ಟೇ ಕೊಡಲಾಗುತ್ತದೆ. ಈ ನೀತಿಯಲ್ಲಿ ಬದಲಾವಣೆಯಾಗಿ ರಾಜ್ಯದ ವಿಶ್ವವಿದ್ಯಾಲಯಗಳಿಗೆ ಹೆಚ್ಚಿಗೆ ಧನ ಸಹಾಯ ನೀಡಬೇಕು.

ನಮ್ಮ ದೇಶದ ನಿರಕ್ಷರತೆಯನ್ನು ನಿರ್ನಾಮಮಾಡುವ ಸಲುವಾಗಿ ಪ್ರಾಥಮಿಕ ಶಿಕ್ಷಣವನ್ನು ಸಾರ್ವತ್ರಿಕಗೊಳಿಸಲಿಕ್ಕೆ ಹೆಚ್ಚು ಒತ್ತು ಕೊಡುವುದು ಅತ್ಯಗತ್ಯ. ಈ ದೃಷ್ಟಿಯಿಂದಲೇ 1990 ಗುರಿಮುಟ್ಟುವ ವರ್ಷವನ್ನಾಗಿ ನಿರ್ಧರಿಸಲಾಗಿದೆ. ಇದು ಬಹಳ ಕಷ್ಟಕರವಾದ ಕೆಲಸ. ನಮ್ಮ ದೇಶದ ಪ್ರತಿಯೊಬ್ಬರೂ ಮುಖ್ಯವಾಗಿ ಶಿಕ್ಷಕರು ಈ ಗುರಿಯತ್ತ ಗಮನಹರಿಸುವುದು ಅತ್ಯಗತ್ಯ. ಸರಕಾರಗಳಷ್ಟೇ ಈ ಗುರಿಯನ್ನು ಸಾಧಿಸಲು ಶಕ್ಯವಿಲ್ಲ. ಎಲ್ಲ ವಿಧದ ಸ್ವತಂತ್ರ ಸಂಘ ಸಂಸ್ಥೆಗಳೂ ಇದರಲ್ಲಿ ಭಾಗವಹಿಸಿ ಇದರ ಸಾಧನೆಗಾಗಿ ಶ್ರಮಿಸುವುದು ಅಗತ್ಯ. ಉದಾಹರಣೆಗಾಗಿ ಸಹಕಾರಿ ಸಂಘಗಳು: ಅದರಲ್ಲೂ ಗ್ರಾಮಾಂತರ ಪ್ರದೇಶಗಳಲ್ಲಿರುವ ಪ್ರಾಥಮಿಕ ಒಕ್ಕಲುತನದ ಸಹಕಾರಿ ಸಂಘಗಳು ಪ್ರೌಢ ಶಿಕ್ಷಣ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳುವಂತೆ ಮಾಡಿ ಅವುಗಳಿಗೆಲ್ಲ ಸ್ವಯಂ ಸ್ಫೂರ್ತಿಕ ಸಂಘಟನೆಗಳ ಸ್ಥಾನ ಒದಗಿಸಬೇಕು.

ಪ್ರಾಥಮಿಕ ಶಿಕ್ಷಣದ ಅಡಿಪಾಯವನ್ನು ಬಲಿಷ್ಟಗೊಳಿಸಿದರೆ, ಮಾಧ್ಯಮಿಕ ಹಾಗೂ ಉಚ್ಚಮಟ್ಟದ ಶಿಕ್ಷಣಕ್ಕೂ ಒತ್ತಡಬರುತ್ತದೆ ಈ ರಂಗದಲ್ಲಿ ವಿದ್ಯಾರ್ಥಿಗಳಿಂದ ಬರುವ ಒತ್ತಡವನ್ನು ಪೂರೈಸಲು ದುರಾದೃಷ್ಟದಿಂದ ನಮಗೆ ಸಾಧ್ಯವಾಗುತ್ತಿಲ್ಲ. ಉಚ್ಚಮಟ್ಟದ ಶಿಕ್ಷಣದಲ್ಲಿ ಹೆಚ್ಚು ಪರಿಣಿತರಲ್ಲದ ವಿದ್ಯಾರ್ಥಿಗಳ ಒತ್ತಡವನ್ನು ಕಡಿಮೆ ಮಾಡಬೇಕಾದರೆ, 10–12 ವರ್ಷಗಳ ವಿದ್ಯಾಭ್ಯಾಸದ ನಂತರ ಅಂಥವರನ್ನು ಹೆಚ್ಚು ಅರ್ಥಪೂರ್ಣವಾದ ತಾಂತ್ರಿಕ ಶಿಕ್ಷಣಕ್ಕೆ ಅವರನ್ನು ಸೇರಿಸುವ ವ್ಯವಸ್ಥೆ ಮಾಡಬೇಕು. ಆದರೆ ದುರಾದೃಷ್ಟವಶಾತ್ ನಮ್ಮ ಶಿಕ್ಷಣವನ್ನು ತಾಂತ್ರಿಕಗೊಳಿಸುವಲ್ಲಿಯೂ ವಿಫಲಗೊಂಡಿದ್ದೇವೆ. ತಾಂತ್ರಿಕ ಶಿಕ್ಷಣ ಕೊಡುವುದಷ್ಟೇ ಅಲ್ಲ, ಯುವಕರಿಗೆ ಲಾಭದಾಯಕ ಉದ್ಯೋಗದ ವ್ಯವಸ್ಥೆಯನ್ನು ಮಾಡಬೇಕು.

ದೇಶದಲ್ಲಿ ಇನ್ನೂ ಹೆಚ್ಚು ಕಾಲೇಜು ಮತ್ತು ವಿಶ್ವವಿದ್ಯಾಲಯಗಳನ್ನು ಸ್ಥಾಪಿಸಬಾರದೆಂಬ ವಿಶ್ವವಿದ್ಯಾಲಯ ಸಹಾಯಕಮಿಟಿಯ ಅಭಿಪ್ರಾಯವನ್ನು ಒಪ್ಪಿಕೊಳ್ಳುತ್ತೇನೆ. ಉಚ್ಚಮಟ್ಟದ ಶಿಕ್ಷಣದಲ್ಲಿ ನಮ್ಮ ಸ್ಥಾನವನ್ನು ಭದ್ರಗೊಳಿಸಬೇಕು. ಪತ್ರವ್ಯವಹಾರಗಳ ಮೂಲಕ ಮತ್ತು ಬಹಿರಂಗ ವಿಶ್ವವಿದ್ಯಾಲಯ ಪದ್ಧತಿಗಳಿಗೆ ಹೆಚ್ಚು ಒತ್ತು ಕೊಡಬೇಕು. ನಮ್ಮ ದೇಶದಲ್ಲಿಯೇ ಪ್ರಥಮವಾಗಿ ಪ್ರಾರಂಭ ಮಾಡಿರುವ ಆಂಧ್ರಪ್ರದೇಶ ಬಹಿರಂಗ ವಿಶ್ವವಿದ್ಯಾಲಯ ಒಳ್ಳೆ ರೀತಿಯಲ್ಲಿ ಕೆಲಸ ಪ್ರಾರಂಭಿಸಿದೆ.

ನಮ್ಮ ದೇಶದ ನಾನಾಪ್ರದೇಶಗಳಲ್ಲಿ ಎದುರಿಸುತ್ತಿರುವ ಪ್ರತ್ಯೇಕತಾವಾದಿ ಮನೋಭಾವನೆಯ ಮತ್ತು ಮತೀಯ ಗಲಭೆಗಳ ಸಂದರ್ಭದಲ್ಲಿ, ನಮ್ಮ ಶಿಕ್ಷಣದಲ್ಲಿ ರಾಷ್ಟ್ರೀಯ ಐಕ್ಯತೆಗೆ ಹೆಚ್ಚು ಮಹತ್ವ ಕೊಡುವುದು ಅಗತ್ಯ, ಪ್ರತಿಯೊಂದು ಕಡೆಯಲ್ಲಿ ಕೂಡ ಚಿಕ್ಕ ಹುಡುಗರೇ ಈ ಪ್ರತ್ಯೇಕತಾವಾದಕ್ಕೆ ಪ್ರಥಮ ಬಲಿಪಶುಗಳಾಗುತ್ತಿದ್ದಾರೆ, ಮೂಲಭೂತವಾಗಿ ಇದು ಆರ್ಥಿಕ ಪ್ರಶ್ನೆಯಾಗಿದ್ದರೂ ಕೂಡ, ಶಿಕ್ಷಣದ ಮೂಲಕ ವಿದ್ಯಾರ್ಥಿಗಳಲ್ಲಿ ರಾಷ್ಟ್ರೀಯ ಭಾವೈಕ್ಯತೆಯ ಅರಿವನ್ನುಂಟುಮಾಡುವಲ್ಲಿ ನಾವು ಯಶಸ್ವಿಯಾಗಿಲ್ಲೆಂಬುದನ್ನು ಅಲ್ಲಗಳೆಯಲು ಸಾಧ್ಯವಿಲ್ಲ, ಈಗಲೂ ಕೂಡ ಪಠ್ಯಪುಸ್ತಕಗಳು ಅದರಲ್ಲೂ ಮುಖ್ಯವಾಗಿ "ಚರಿತ್ರೆ" ಪುಸ್ತಕಗಳು ಮತೀಯ ಪ್ರತ್ಯೇಕತಾವಾದಗಳಿಂದ ದೂರವಾಗಿಲ್ಲ. ನೇತಾಜಿ ಸುಭಾಸ್ ಚಂದ್ರ ಬೋಸರ ನೇತೃತ್ವದಲ್ಲಿಯೇ ಐ.ಎನ್.ಎ.ಯಂಥ ಸ್ವಾತಂತ್ರ್ಯ ಹೋರಾಟ ಅಥವಾ ಆರ್.ಐ.ಎನ್. (ನಾವಿಕರ ಬಂಡಾಯ) ದಂಥ ಸ್ವಾತಂತ್ರ್ಯ ಹೋರಾಟ ನಡೆದಾಗ, ಹಿಂದೂ, ಮುಸ್ಲಿಂ, ಸಿಖ್ ಕ್ರಿಶ್ಚನ್ ಅಷ್ಟೇ ಅಲ್ಲ ಆಂಗ್ಲೋ-ಇಂಡಿಯನ್ನರೂ ಕೂಡ, ಒಟ್ಟಿಗೆ ಸೇರಿ, ಬ್ರಿಟಿಷರ ಪ್ರಚೋದನೆಯಿಂದ ಹಿಂದೂ-ಮುಸಲ್ಮಾನರು ರಕ್ತಸುರಿಸುವುದರಲ್ಲಿ ಮಗ್ನರಾಗಿದ್ದಾಗ, ದೇಶದ ಸ್ವಾತಂತ್ರ್ಯದ ಸಲುವಾಗಿ ಕೂಡಿಯೇ ಹೋರಾಟ ನಡೆಸಿರುವ ಪೌರುಷದಾಯಕ ಉದಾಹರಣೆಗಳನ್ನು "ಚರಿತ್ರೆ"ಯ ಮತ್ತು ಇತರ ಪಠ್ಯಗಳಲ್ಲಿ ಸೇರಿಸುವುದು ಅತ್ಯಗತ್ಯ. ಜಾತ್ಯಾತೀತವಾದ ಸಂವಿಧಾನದ 32 ವರ್ಷಗಳ ನಂತರ ಕೂಡ ನಮ್ಮ ದೇಶದಲ್ಲಿ ಹಿಂದೂ ವಿಶ್ವವಿದ್ಯಾಲಯ ಮುಸ್ಲಿಂ ವಿಶ್ವವಿದ್ಯಾಲಯಗಳನ್ನು ಸರಕಾರದ ಖರ್ಚಿನಿಂದಲೇ ನಡೆಸುತ್ತಿರುವುದು ಅತಿ ಹೇಯಕರವಾಗಿದೆ. ಈ ವಿಶ್ವವಿದ್ಯಾಲಯಗಳ ಹೆಸರುಗಳನ್ನು ಬದಲಿಸಲು ಸಾಧ್ಯವಿಲ್ಲವೇ ? ಅಲಿಘಡ ಮುಸ್ಲಿಂ ವಿಶ್ವವಿದ್ಯಾಲಯವನ್ನು ಸರ್ ಸಯ್ಯದ್ ಅಹಮದ್ ಖಾನ್ ವಿಶ್ವವಿದ್ಯಾಲಯವೆಂದೂ, ಬನಾರಸ್ ವಿಶ್ವವಿದ್ಯಾಲಯವನ್ನು ಪಂಡಿತ ಮದನ ಮೋಹನ ಮಾಲವೀಯ ವಿಶ್ವವಿದ್ಯಾಲಯವೆಂದೂ ಹೆಸರಿಡಬೇಕೆಂದು ನಾನು ಸೂಚಿಸುತ್ತೇನೆ. ಈ ರೀತಿ ಮಾಡಿದರೆ ರಾಷ್ಟ್ರೀಯ ಭಾವೈಕ್ಯತೆಗೆ ನಿಜವಾಗಿಯೂ ಸಹಾಯವಾಗಬಹುದಾಗಿದೆ.

ಎಲ್ಲ ವಿದ್ಯಾರ್ಥಿಗಳಿಗೂ ನ್ಯಾಶನಲ್ ಯೋಜನೆಯನ್ನು ಕಡ್ಡಾಯಗೊಳಿಸಬೇಕು, ಡಿಗ್ರಿ ಮಟ್ಟದಲ್ಲಿದ್ದರೂ. ಇದನ್ನು ಪರೀಕ್ಷೆಯ ಪರಿಣಾಮಗಳಿಗೆ ಒಂದಲ್ಲೊಂದು ರೀತಿಯಲ್ಲಿ ಸಂಬಂಧ ಇರುವಂತೆ ಮಾಡಬೇಕು. ಪ್ರಾಥಮಿಕ ಶಿಕ್ಷಣದ ಪ್ರಸಾರ, ಪ್ರೌಢನಿರಕ್ಷರತೆಯ ನಿವಾರಣೆ, ಸಂತತಿ ನಿಯಂತ್ರಣ, ಆರೋಗ್ಯ ಸೇವೆ, ಹಳ್ಳಿಯ ರಸ್ತೆಗಳ ರಚನೆ, ಕೆರೆಗಳನ್ನು ಅಗೆಯುವುದು, ಕೆರೆ ಕಟ್ಟುವುದು ಮುಂತಾದ ದೇಶವನ್ನು ಕಟ್ಟುವ ನಾನಾವಿಧದ ಕಾರ್ಯಕ್ರಮಗಳಲ್ಲಿ ವಿದ್ಯಾರ್ಥಿಗಳು ಪಾಲ್ಗೊಳ್ಳುವಂತೆ ಮಾಡಬೇಕು ಇದರಿಂದ ವಿದ್ಯಾರ್ಥಿಗಳ ನಡತೆ–ಗುಣಮಟ್ಟ ಅಭಿವೃದ್ಧಿಗೊಳಿಸಲು ಮತ್ತು ರಾಷ್ಟ್ರೀಯ ರಚನೆಯ ಕಾರ್ಯಕ್ರಮದಲ್ಲಿ ಪ್ರಗತಿಯಾಗಲು ಇದು ಸಹಾಯಕವಾಗುತ್ತದೆ.

ನಮ್ಮ ಸಂವಿಧಾನದ ರಾಜ್ಯಪದದಿಯಲ್ಲಿ ಶಿಕ್ಷಣವನ್ನು ಸೇರಿಸಬೇಕೆಂದು ನನ್ನ ಬಲವಾದ ಅಭಿಪ್ರಾಯವಾಗಿದೆ, ಸಂವಿಧಾನ ರಚಿಸುವ ಸಲುವಾಗಿ ಸಭೆ ಸೇರಿದಾಗ ಶಿಕ್ಷಣವನ್ನು ಕೇಂದ್ರದ ಯಾದಿಯಲ್ಲಿ ಸೇರಿಸ ಬೇಕೋ, ರಾಜ್ಯ ಅಥವಾ ಮಿಶ್ರ (ಕನ್‌ಕರೆಂಟ್) ಯಾದಿಯಲ್ಲಿ ಸೇರಿಸಬೇಕೋ ಎಂಬ ವಿಷಯ ಕುರಿತು ಸುಂದರ ಚರ್ಚೆ ನಡೆಯಿತು. ಚರ್ಚೆಯಲ್ಲಿ ಬಂದ ಎಲ್ಲ ಅಂಶಗಳನ್ನು ಪರಿಗಣಿಸಿದ ನಂತರ ಅಂದಿನ ರಾಷ್ಟ್ರ ಮುಖಂಡರಾದ ನೆಹರೂ, ಪಟೇಲ್, ಆಜಾದ್, ಅಂಬೇಡ್ಕರ್‌ರವರ ಮುಖಂಡತ್ವ ಶಿಕ್ಷಣ ವಿಷಯ ರಾಜ್ಯದ ಪಟ್ಟಿಯಲ್ಲಿರಬೇಕೆಂದು ನಿರ್ಣಯಿಸಿದರು. ಕೃಷ್ಣಮಾಚಾರಿಯವರು ಕರಡು ಕಮಿಟಿಯ ಪರವಾಗಿ ಮಾತನಾಡುತ್ತಾ ಶಿಕ್ಷಣವನ್ನು ರಾಜ್ಯ ಪಟ್ಟಿಯಲ್ಲಿ ಸೇರಿಸಿದರೆ ಹಣದ ಸಮಸ್ಯೆ ಉಂಟಾಗುವುದಿಲ್ಲೆಂದು ಸಂವಿಧಾನ ಅಸೆಂಬ್ಲಿಯಲ್ಲಿ ಹೇಳಿದ್ದರು. 1975ರಲ್ಲಿ ಸಂವಿಧಾನಕ್ಕೆ 42ನೆಯ ತಿದ್ದುಪಡಿ ಮೂಲಕ ಶಿಕ್ಷಣವನ್ನು ಕನ್‌ಕರೆಂಟ್ (ಮಿಶ್ರ) ಪಟ್ಟಿಯಲ್ಲಿ ಸೇರಿಸಿ, ಶಿಕ್ಷಣದ ಮೇಲೆ ಕೇಂದ್ರ ಹೆಚ್ಚು ಅಧಿಕಾರ ಪಡೆಯುವಂತೆ ಮಾಡಲಾಯಿತು. ರಾಜ್ಯಾದ್ಯಂತ ಸರಿಸಮಾನವಾದ ಸ್ಟ್ಯಾಂಡರ್ಡ್ ಇಟ್ಟುಕೊಳ್ಳುವ ಸಲುವಾಗಿ ಅದರ ಅವಶ್ಯಕತೆ ಇರಲಿಲ್ಲ. ಅದರ ಸಲುವಾಗಿ ಪ್ರತ್ಯೇಕ ವ್ಯವಸ್ಥೆಗಳಿವೆ. ಜಗತ್ತಿನಲ್ಲಿ ಒಕ್ಕೂಟದ ಅಥವ ಅರ್ಧ ಒಕ್ಕೂಟದ ಯಾವ ಸರ್ಕಾರವೇ ಆಗಲಿ ಶಿಕ್ಷಣವನ್ನಾಗಲೀ, ಅಥವಾ ಸಾಂಸ್ಕೃತಿಕ ಸಂಬಂಧವಿರುವ ಯಾವುದೇ ವಿಷಯವನ್ನಾಗಲೀ ಕೇಂದ್ರ ಯಾ ಮಿಶ್ರಪಟ್ಟಿಯಲ್ಲಿ ಸೇರಿಸಿರುವುದಿಲ್ಲ. ಕೇಂದ್ರ ಮತ್ತು ರಾಜ್ಯ ಸರಕಾರಗಳ ಮಿಶ್ರ ಪಟ್ಟಿಯಲ್ಲಿ ಸೇರಿಸಿದ ನಂತರ ಶಿಕ್ಷಣಕ್ಕೆ ಹೆಚ್ಚು ಹಣ ಒದಗಿಸಲಾಗುವುದೆಂಬ ಅಪೇಕ್ಷೆಯೂ ಹುಸಿಯಾಯಿತು. ರಾಜ್ಯಗಳಿಗೆ ಹೆಚ್ಚು ಅಧಿಕಾರ ಸಿಗಬೇಕೆಂದು ಹಲವಾರು ರಾಜ್ಯಗಳಿಂದ, ಮುಖ್ಯವಾಗಿ ದಕ್ಷಿಣದಿಂದ ಹಲವಾರು ಬೇಡಿಕೆ ಬರುತ್ತಿರುವಾಗ, ಸರ್ಕಾರಿಯಾ ಕಮಿಟಿ ಅದರ ಕುರಿತು ಹೆಚ್ಚು ಗಮನ ಹರಿಸುತ್ತದೆಂದು ಭಾವಿಸುತ್ತೇನೆ.

ನಗರಸಭೆ ಚುನಾವಣೆಗಳ ಫಲಿತಾಂಶ

-ಎನ್ಕೆ

ಮೂರು ನಗರ ಕಾರ್ಪೊರೇಷನ್, 10 ನಗರ ಕೌನ್ಸಿಲ್, 160 ನಗರಸಭೆಗಳ ಚುನಾವಣೆ ಮುಕ್ತಾಯಗೊಂಡು, ಅವುಗಳ ಪ್ರತಿಫಲ ಜನರ ಕೈಸೇರಿವೆ. ನಗರ ಕೌನ್ಸಿಲ್, ನಗರಸಭೆಗಳ ಚುನಾವಣೆಯಲ್ಲಿ ಬಹಳಷ್ಟು ಪ್ರದೇಶಗಳಲ್ಲಿ ಬಿಜೆಪಿ ಮತ್ತು ಎರಡೂ ಕಮ್ಯುನಿಸ್ಟ್ ಪಾರ್ಟಿಗಳನ್ನು ಬಿಟ್ಟು ಬೇರೆ ಪಕ್ಷಗಳು ನೇರವಾಗಿ ಮತದಾರರನ್ನು ಎದುರಿಸಿರುವುದಿಲ್ಲ. ಕಾರ್ಪೊರೇಶನ್ ಚುನಾವಣೆಗಳಲ್ಲಿ ಮಾತ್ರ ಪಕ್ಷಗಳ ನೇರ ಸ್ಪರ್ಧೆ ನಡೆದಿದೆ. ಕಾರ್ಪೊರೇಶನಗಳ ಚುನಾವಣೆಯಲ್ಲಿ ಬೆಂಗಳೂರು ನಗರ ಕಾರ್ಪೊರೇಶನಿನಲ್ಲಿ ಜನತಾ ಪಕ್ಷ 57 ಸ್ಥಾನ ಗಳಿಸಿ ಬಹುಮತ ಪಡೆದಿದೆ. ಆದರೆ ಹುಬ್ಬಳ್ಳಿ–ಧಾರವಾಡ (21), ಮೈಸೂರು (25) ಗಳಲ್ಲಿ ದೊಡ್ಡ ಪಕ್ಷವಾಗಿ ಆರಿಸಿ ಬಂದಿದೆ. ಕಾಂಗ್ರೆಸ್ ಎರಡನೇ ಸ್ಥಾನ, ಬಿಜೆಪಿ ಮೂರನೇ ಸ್ಥಾನ ಪಡೆದೇ ಇವು ಮೂರರಲ್ಲೂ ಸಮಾಧಾನ ಪಡೆದುಕೊಳ್ಳಬೇಕಾಗಿದೆ. ಹೀಗಿರುವಾಗ ನಗರಸಭೆ ಚುನಾವಣೆಗಳಲ್ಲಿ ಶೇ 80 ರಷ್ಟು ಬಹುಮತ ಪಡೆದಿದ್ದೇವೆಂಬ ರಾಮಕೃಷ್ಣ ಹೆಗಡೆಯವರ ಹೇಳಿಕೆಯಾಗಲಿ, ಚುನಾವಣೆಯ ಫಲಿತಾಂಶ ಜನತಾ ಸರಕಾರದ ಪ್ರಭಾವ ಕುಂದಿಸಿ, ಕಾಂಗ್ರೆಸ್ ಪಕ್ಷದ ಹೆಚ್ಚು ಸದಸ್ಯರು ಆರಿಸಿ ಬರಲಿಕ್ಕೆ ಅನುವು ಮಾಡಿಕೊಟ್ಟಿದೆಂಬ ಕೆ. ಎಚ್. ಪಾಟೀಲರ ಜಂಭದ ಮಾತಾಗಲೀ, ಕೆಲವು ನಗರ ಸಭೆಗಳಲ್ಲಿ ತಮ್ಮ ಪಕ್ಷ ಬಹುಮತ ಪಡೆದು ಬೇರೆಡೆಗಳಲ್ಲಿ ವಿರೋಧ ಪಕ್ಷವಾಗಿದೆಂದು ಬಿಜೆಪಿ ಮುಖಂಡ ಅದ್ವಾನಿ ಹೇಳಿರುವುದು ಸತ್ಯಕ್ಕೆ ದೂರವಾಗಿದೆಂದೇ ಹೇಳಬೇಕು.

ನಗರ ಸಭೆಗಳಲ್ಲಿ ರಾಜಕೀಯ ಪಕ್ಷವಾಗಿ ಆಡಳಿತ ನಡೆಸುವ ವಾತಾವರಣ ಕರ್ನಾಟಕ ರಾಜ್ಯದಲ್ಲಿಲ್ಲೆಂದು ಈ ಮೊಂಚೆಯೇ ಬರೆದಿದ್ದೆ. ಸ್ಥಳೀಯ ಪರಿಸ್ಥಿತಿಗನುಸಾರವಾಗಿ ಬಹುಮತ ಸಾಧಿಸಿ ಆಡಳಿತ ನಡೆಸಿಕೊಂಡು ಹೋಗುವ ಪದ್ಧತಿ ಇರುವುದರಿಂದ ಈಗಿನ ಬದಲಾದ ಪರಿಸ್ಥಿತಿಯಲ್ಲಿ ಹಳೇ ಪದ್ಧತಿ ಅಳಿಯುತ್ತದೋ ಹೇಗೆಂಬುದನ್ನು ಮುಂದೆ ನೋಡಬೇಕಾಗಿದೆ.

ವಿಧಾನಸಭೆ ಚುನಾವಣೆಯಂತೆಯೇ ಈ ಚುನಾವಣೆಯಲ್ಲಿ ಕೂಡ ಜನತಾ, ಸಿ.ಪಿ.ಐ, ಸಿ.ಪಿ.ಐ.(ಎಂ.) ಪಕ್ಷಗಳೊಳಗೆ ಹೊಂದಾಣಿಕೆ ತರುವ ಪ್ರಯತ್ನ ಮಾಡಲಾಯಿತು. ಕೆಲವೆಡೆ ಅದು ಯಶಸ್ವಿಯಾಗಿದೆ. ಇತರೆಡೆ ಸ್ವತಂತ್ರ ಸ್ಪರ್ಧೆಯೇ ನಡೆದುದರಿಂದ ಆ ರೀತಿಯ ತಿಳುವಳಿಕೆಗೆ ಬರಲಿಕ್ಕಾಗಲಿಲ್ಲ.

ಬೆಂಗಳೂರು ಕಾರ್ಪೊರೇಶನ್ ಚುನಾವಣೆಯಲ್ಲಿ ಮೂರು ಪಕ್ಷಗಳೊಳಗೆ ಹೊಂದಾಣಿಕೆಯಾಗಿತ್ತು. ಆದರೆ ವಿಧಾನಸಭೆ ಚುನಾವಣೆಯಲ್ಲಿ ಯಾವ ರೀತಿ ಒಮ್ಮತದ ಪಕ್ಷಗಳೆಲ್ಲ ವಿಶ್ವಾಸದಿಂದ ಪ್ರಚಾರ ಕಾರ್ಯ ಮಾಡಿಕೊಳ್ಳುತ್ತಿದ್ದರೋ, ಕಾರ್ಪೊರೇಶನ್ ಚುನಾವಣೆಯಲ್ಲಿ ಆ ರೀತಿ ಆಗಲಿಲ್ಲ. ಸ್ಪರ್ಧಿಗಳ ಕುರಿತೇ ಜನತಾ ಪಾರ್ಟಿಯಲ್ಲೇ ಅಸಮಾಧಾನ ಬೆಳೆದಿತ್ತು. ಟಿಕೇಟು ಪಡೆಯಲು ವಿಫಲರಾದವರೆಲ್ಲಾ, ಕಾಂಗ್ರೆಸ್ಸಿನ ಕೆಟ್ಟ ಚಾಳಿಯಂತೆ, ಜನತಾ ತೊರೆದು ಸ್ವತಂತ್ರರಾಗಿ ಸ್ಪರ್ಧಿಸಿದ್ದರು. ಸರಿಯಾದ ಉಮೇದಾರರನ್ನು ನಿಲ್ಲಿಸಿಲ್ಲವೆಂದು ಹಿರಿಯ ಜನತಾ ನಾಯಕರಾದ ಶಾಮಣ್ಣನವರು (ಲೋಕಸಭಾ ಸದಸ್ಯರು) ಪತ್ರಿಕಾ ಹೇಳಿಕೆ ನೀಡಿದ್ದರು. ದಿನ ಪತ್ರಿಕೆಗಳು ಕೂಡ ಈ ಗೊಂದಲಕ್ಕೆ ಪ್ರೋತ್ಸಾಹ ನೀಡಿವೆ. ಹೀಗಾಗಿ ಜಂಟೀ ಪ್ರಚಾರ ನಡೆಯಲಿಲ್ಲ. 13 ವರ್ಷಗಳ ನಂತರ ಚುನಾವಣೆ ನಡೆಸಿ ಸ್ಥಳೀಯ ಸಂಸ್ಥೆಗೆ ಸ್ವಾಯತ್ತಾಧಿಕಾರ ನೀಡುತ್ತಿದ್ದೇವೆ. ಶೇ. 20ರಷ್ಟು ಸ್ಥಾನ ಮಹಿಳೆಯರಿಗೆ ಮೀಸಲಿಟ್ಟಿದ್ದೇವೆ. 18–21 ವಯಸ್ಸಿನವರಿಗೆ ಮತದಾನದ ಹಕ್ಕು ನೀಡಿದ್ದೇವೆಂಬಂಶಗಳನ್ನೊಳಕೊಂಡು, ನಾಗರೀಕರಿಗೆ ನಿರ್ಮಲ ಆಡಳಿತ ನೀಡುತ್ತೇವೆಂದು ಹೇಳಿ ಮತದಾರರನ್ನು ಹುರಿದುಂಬಿಸುವ ಕೆಲಸವನ್ನು ಜನತಾ ಪಕ್ಷವಾಗಲೀ, ಜನತಾ ಸರಕಾರವಾಗಲೀ ಮಾಡಲಿಲ್ಲ. ಕಾರಣ ಚುನಾವಣೆಯ ಕುರಿತು ಜನರಲ್ಲಿ ಆಸ್ತೆ ಇರಲಿಲ್ಲ. ಆದ್ದರಿಂದಲೇ ಬಹಳ ಕಡಿಮೆ ಮತದಾನವಾಗಿದೆ.

ಸಿಪಿಐ (ಎಂ) ಸ್ಪರ್ಧಿಸಿದ ಬೆಂಗಳೂರಿನ ಲಕ್ಕಸಂದ್ರ ಮತ್ತಿನ್ನಿತರ ಮತಕ್ಷೇತ್ರಗಳಲ್ಲಿ ಜನತಾ ಪಾರ್ಟಿಯವರು ಸ್ವತಂತ್ರ ಅಭ್ಯರ್ಥಿಯಾದ ದೊಡ್ಡ ಕಂಟ್ರಾಕ್ಟರುಗಳಿಗೆ ಮತ ಹಾಕಿಸಿದರು. ಅದರಂತೆಯೇ ಸುಬ್ರಮಣ್ಯಪುರದಲ್ಲಿ ಬಲ ಕಮ್ಯುನಿಸ್ಟ್ ಮುಖಂಡರು ಸಿಪಿಐ (ಎಂ) ಸ್ಪರ್ಧಿ ವಿರುದ್ಧ ಗುಟ್ಟಾಗಿ ಪ್ರಚಾರ ಮಾಡಿದರು. (ಎಚ್.ಎ.ಎಲ್.) ಚುನಾವಣೆಯಲ್ಲಿ ತಮ್ಮ ಪಕ್ಷದ ಮುಖಂಡರ ಸೋಲಿಗೆ ಸಿಪಿಐ (ಎಂ) ಕಾರಣವೆಂದು ತಿಳಿದು)

ಮೈಸೂರಿನಲ್ಲಿ ಅಜೀಜಶೇಠರು ಸಿಪಿಐ (ಎಂ) ಪ್ರತಿನಿಧಿ ವಿರುದ್ಧ ಸಿಪಿಐ ಪ್ರತಿನಿಧಿಯನ್ನು ನಿಲ್ಲಿಸಿದ್ದರು. ಹುಬ್ಬಳ್ಳಿಯಲ್ಲಿ ಜನತಾ ಸಿಪಿಐ ಹೊಂದಾಣಿಕೆಯಿದ್ದರೂ ಕೂಡ ಸಿಪಿಐ ಅದನ್ನು ಉಳಿಸಿಕೊಂಡಿಲ್ಲ. ಹೀಗಾಗಿ ವಿಧಾನ ಸಭಾ ಚುನಾವಣೆಯ ಸಮಯದಲ್ಲಿ ಯಾವ ರೀತಿ ಒಂದೇ ಮನಸ್ಸಿನಿಂದ ಪಕ್ಷದ ಮುಖಂಡರು ಕಾರ್ಯಕರ್ತರು ಕೆಲಸ ಮಾಡಿದ್ದರೋ ಆ ರೀತಿ ನಗರಸಭೆ ಚುನಾವಣೆಯಲ್ಲಿ ಆಗಲಿಲ್ಲ. ಆ ಕಾರಣದಿಂದಲೇ ಇನ್ನೂ ಹೆಚ್ಚಿನ ಉಮೇದುವಾರರನ್ನು ಗೆಲ್ಲಿಸುವ ಸಾಧ್ಯತೆಗಳಿದ್ದರೂ ಕೂಡ ಈ ಮೂರು ಪಕ್ಷಗಳಿಗೆ ಸಿಗಬೇಕಾದ ಯಶಸ್ಸು ದೊರೆಯಲಿಲ್ಲ. ಈ ಕೊರತೆಯನ್ನು ತುಂಬಿಕೊಳ್ಳಲು ಈ ಮೂರು ಪಕ್ಷದ ಮುಖಂಡರು ಪ್ರಯತ್ನಿಸುವುದು ಅತ್ಯಗತ್ಯ, ಯಾಕೆಂದರೆ ಮುಂದಿನ ನವೆಂಬರ್ ತಿಂಗಳಲ್ಲಿ ಕೊಡಗು, ದಕ್ಷಿಣ ಕನ್ನಡ, ಬೆಳಗಾವ, ಉತ್ತರ ಕನ್ನಡ, ಮೊದಲಾದ ಜಿಲ್ಲೆಗಳಲ್ಲಿ ನಗರಸಭೆ ಕಾರ್ಪೊರೇಷನ್‌ನ ಚುನಾವಣೆಗಳು ನಡೆಯಲಿವೆ. ಹಾಗೆಯೇ ಜಿಲ್ಲಾ ಪರಿಷತ್ತು, ಪಂಚಾಯಿತಿಗಳಿಗೂ ಚುನಾವಣೆಯಾಗಬಹುದು. ಆಗ ಮಾತ್ರ ಈ ರೀತಿಯ ತಪ್ಪಾಗದಂತೆ ಎಚ್ಚರಿಕೆ ವಹಿಸುವುದು ಅತ್ಯಗತ್ಯ.

ತನ್ನ ಪ್ರಭಾವವನ್ನು ಕಳೆದುಕೊಳ್ಳುತ್ತಿರುವ ಇಂದಿರಾ ಕಾಂಗ್ರೆಸ್ ಕೆ.ಹೆಚ್. ಪಾಟೀಲರನ್ನು ಅಧ್ಯಕ್ಷರನ್ನಾಗಿ ಮಾಡಿ ನಗರಸಭೆ ಚುನಾವಣೆಯಲ್ಲಿ ಗೆಲ್ಲುವ ಪ್ರಯತ್ನ ಮಾಡಿತ್ತು. ಆದರೆ ಪಕ್ಷ ಸೋಲನ್ನನುಭವಿಸಬೇಕಾಯಿತು. ವೀರಪ್ಪ ಮೊಯಿಲಿಯವರ ಆಟಂಬಾಂಬು ಹುಸಿಯಾಯಿತು.

ವಿಧಾನ ಸಭೆ ಚುನಾವಣೆಯಲ್ಲಿ 18 ಸ್ಥಾನಗಳಿಂದ ಬಿಜೆಪಿ ಕರ್ನಾಟಕದಲ್ಲಿ ಮುಂದೆ ಆಳುವವರು ತಾವೇ ಎಂಬ ಘಮಂಡಿಯಿಂದ ಸಿಕ್ಕಲ್ಲೆಲ್ಲ ಸಾಕಷ್ಟು ಹೆಚ್ಚು ಸ್ಥಾನ ಪಡೆಯಲು ಪ್ರಯತ್ನ ಮಾಡಿ ಜನತಾದೊಡನೆ ಹೊಂದಾಣಿಕೆ ಬಿಟ್ಟುಕೊಟ್ಟು ಸ್ವತಂತ್ರವಾಗಿಯೇ ಸ್ಪರ್ಧಿಸಿ ಈ ರಾಜ್ಯದಲ್ಲಿ ತಾವು ಹೇಳಿಕೊಳ್ಳುವಂಥ ಪ್ರಭಾವ ತಮ್ಮ ಪಕ್ಷಕ್ಕಿಲ್ಲೆಂದು ಮನದಟ್ಟು ಮಾಡಿಕೊಡುವ ರೀತಿಯಲ್ಲಿ ಅತಿ ಕಡಿಮೆ ಸ್ಥಾನ ಗಳಿಸಿದ್ದಾರೆ.

ಸರ್ವಾಧಿಕಾರಿ ಇಂದಿರಾ ಗಾಂಧಿಯ ದಾರಿಯಲ್ಲೇ ಮುನ್ನಡೆಯುತ್ತಿರುವ ಬಂಗಾರಪ್ಪನವರ ಕ್ರಾಂತಿರಂಗ ನಾಮಾವಶೇಷವಾಗಿದೆ.

ಎಡಪಕ್ಷಗಳಾದ ಸಿಪಿಐ-ಸಿಪಿಐ(ಎಂ)ಗಳೂ ಮುಖ್ಯವಾಗಿ ನಗರ ಕಾರ್ಪೊರೇಶನ ಚುನಾವಣೆಯಲ್ಲಿ ಏನೂ ಸಾಧಿಸಿಲ್ಲೆಂದೇ ಹೇಳಬೇಕು. ಸಿಪಿಐ 5 ಸ್ಥಾನಗಳಿದ್ದರೂ, ಸಿಪಿಐ (ಎಂ)ಗೆ ಒಂದು ಸ್ಥಾನ ಕೂಡ ಸಿಗದಿರುವುದರಿಂದ ಎಡ ಪಕ್ಷಗಳು ಇದರ ಕುರಿತು ಗಂಭೀರ ವಿಚಾರ ಮಾಡುವುದು ಅತ್ಯಗತ್ಯ. ನಾನು ಈ ಹಿಂದಿನ ಲೇಖನಗಳಲ್ಲಿ ಬರೆದಂತೆ ನಗರ ಸಭೆ ಚುನಾವಣೆಗಳಲ್ಲಿ ಜಾತಿ, ಹಣ ಪ್ರಧಾನ ಪಾತ್ರ ವಹಿಸಿದೆ. ಇದರಂತೆಯೇ ಆರ್ಥಿಕ ಬೇಡಿಕೆಗಳನ್ನು ಪಡೆಯಲು ನಿಷ್ಠೆಯಿಂದ ಕೆಂಬಾವುಟದಡಿಯಲ್ಲಿ ಅತಿ ಕಷ್ಟಕರವಾದ ಮುಷ್ಕರ ನಡೆಸಿ, ಹೋರಾಡಿ, ಪ್ರತಿಫಲ ಪಡೆದ ಕಾರ್ಮಿಕ ವರ್ಗ ಈ ಚುನಾವಣೆಯಲ್ಲಿ ತಮಿಳು, ಮುಸ್ಲಿಂ, ಹೀಗೆ ಜಾತೀಯ ಆಧಾರದಲ್ಲಿ ಮತ ನೀಡಿ ಎಡ ಪಕ್ಷಗಳ ಸೋಲಿಗೆ ಕಾರಣ ಭೂತವಾಗಿದೆಂಬುದು ಎದ್ದು ಕಾಣುತ್ತಿದೆ.

ಆರ್ಥಿಕ, ರಾಜಕೀಯ ಹೋರಾಟಗಳನ್ನು ನಡೆಸಿ, ಕಾರ್ಮಿಕರಲ್ಲಿ ರಾಜಕೀಯ ಪರಿಜ್ಞಾನವನ್ನುಂಟು ಮಾಡಿ ಸಮಾಜದ ಬದಲಾವಣೆಗಾಗಿ ರಾಜಕೀಯ ಹೋರಾಟ ಮಾಡಲು ಕಾರ್ಮಿಕ ವರ್ಗ ಮುಂದಾಗುವುದು ಅತ್ಯಗತ್ಯವೆಂಬ ತಿಳುವಳಿಕೆಯನ್ನುಂಟು ಮಾಡುವುದು ಅತ್ಯಗತ್ಯ. ಎಐಟಿಯುಸಿ ಸಿಐಟಿಯು ಮುಖಂಡತ್ವ ಕಾರ್ಮಿಕರ ಆರ್ಥಿಕ ಬೇಡಿಕೆಗಳಿಗಾಗಿಯಷ್ಟೆ ಹೋರಾಟ ನಡೆಸುತ್ತಿರುವುದರಿಂದ, ಇವರೆಲ್ಲ ಉತ್ತಮ ಹೋರಾಟಗಾರರೆಂದಷ್ಟೆ ಕಾರ್ಮಿಕರು ಇವರ ಬೆನ್ನು ಹಿಂದೆ ಬರುತ್ತಾರಲ್ಲದೆ, ಬೇರೆ ರಾಜಕೀಯ, ಚುನಾವಣೆಗಳು ಬಂದಾಗ ಕೆಂಬಾವುಟ ಮರೆತು ಜಾತಿ, ಧರ್ಮವನ್ನು ಹಿಡಿಯುತ್ತಿರುವುದು ಚುನಾವಣೆಯಲ್ಲಿ ಸೋಲಿಗೆ ಕಾರಣವಾಗಿದೆ. ಎಡ ಪಕ್ಷಗಳ ಮುಖಂಡರು ಇದನ್ನು ತಿಳಿದುಕೊಂಡು ಕಾರ್ಮಿಕರಲ್ಲಿ ರಾಜಕೀಯ ಜಾಗೃತಿಯನ್ನುಂಟು ಮಾಡುವುದು ಅಗತ್ಯ.

ಈ ಚುನಾವಣೆಯಲ್ಲಿ ಆರಿಸಿ ಬಂದಿರುವ ಜನತಾ, ಸಿಪಿಐ ಮತ್ತು ಸಿಪಿಐ (ಎಂ) ಕಾರ್ಯಕರ್ತರ ಮೇಲೆ ಗುರುತರವಾದ ಜವಾಬ್ದಾರಿ ಬಿದ್ದಿದೆ. ಎಲ್ಲ ನಗರಸಭೆ ಕಾರ್ಪೊರೇಷನ್‌ಗಳ ಆಡಳಿತ ಭ್ರಷ್ಟಾಚಾರ ಅಲಕ್ಷ್ಯತನ, ಪಕ್ಷಪಾತಗಳಿಂದ ಕೂಡಿದೆ. ಜನತಾ ಸರಕಾರದಲ್ಲಿ ಕೂಡ ಭ್ರಷ್ಟಾಚಾರ ಮುಂದುವರಿಯುತ್ತಿರುವಾಗ, ನಗರ ಸಭೆಗಳಲ್ಲಿಯೂ ಈ ಜಾಡ್ಯ ಮುಂದುವರಿಯುವದರಲ್ಲಿ ಸಂಶಯವಿಲ್ಲ. ಭ್ರಷ್ಟಾಚಾರ ರಹಿತ, ತಮ್ಮ ಸಮಸ್ಯೆಗಳಿಗೆ ತೀವ್ರ ಪರಿಹಾರ ಒದಗಿಸುವ ಆಡಳಿತ ಬೇಕೆಂಬ ಅಪೇಕ್ಷೆ ಹೊಂದಿದವರಾಗಿದ್ದಾರೆ ಮತದಾರರು. ಅವರ ಆಸೆ-ಆಕಾಂಕ್ಷೆಯನ್ನು ಪೂರೈಸುವ ರೀತಿಯಲ್ಲಿ ಆಡಳಿತ ನಡೆಸುವುದು ಈ ನಗರ ಪಿತಾಮಹರ ಕರ್ತವ್ಯವಾಗಿದೆ.

ಕಾಂಗ್ರೆಸ್ಸಿನ ಸರ್ವಾಧಿಕಾರಿ ಶಕ್ತಿಯ ವಿರುದ್ಧ ಜನಾಭಿಪ್ರಾಯವನ್ನುಂಟು ಮಾಡಬೇಕಾದರೆ ಈಗ ಆರಿಸಿ ಬಂದಿರುವ ಜನತಾ ಸಿಪಿಐ, ಸಿಪಿಐ (ಎಂ) ನಗರಸಭೆ ಸದಸ್ಯರು ಒಳ್ಳೆಯ ಕೆಲಸ ಮಾಡಿ, ಆಡಳಿತೆಯನ್ನು ಸುಧಾರಿಸಿ, ನಗರವಾಸಿಗಳ ವಿಶ್ವಾಸಕ್ಕೆ ಪಾತ್ರರಾಗಬೇಕು. ಹಾಗಾದರೆ ಮಾತ್ರ ಮುಂದಿನ ಕೆಲವು ತಿಂಗಳಲ್ಲಿ ರಾಜ್ಯದ ಇತರ ಪ್ರದೇಶಗಳಲ್ಲಿ ನಗರಸಭೆ ಚುನಾವಣೆ ನಡೆದಾಗ ಇನ್ನೂ ಹೆಚ್ಚಿಗೆ ಜಯ ಗಳಿಸಲು ಸಾಧ್ಯವಾಗುತ್ತದೆ, ಹೊಸತಾಗಿ ಆರಿಸಿ ಬಂದಿರುವ ಎಲ್ಲ ನಗರ ಸಭೆ, ಕಾರ್ಪೊರೇಶನ್‌ಗಳ ಸದಸ್ಯರನ್ನು ಸ್ವಾಗತಿಸುತ್ತಾ, ಜನಪ್ರಿಯತೆ ಗಳಿಸುವ ರೀತಿಯಲ್ಲಿ ಆಡಳಿತೆಯನ್ನು ನಡೆಸುತ್ತಾರೆಂದು ಅಪೇಕ್ಷಿಸುತ್ತೇವೆ.

ಪುರಸಭೆ ಚುನಾವಣೆಯಲ್ಲಿ ಆರಿಸಿ ಬಂದ ಸಿ. ಪಿ. ಐ. (ಎಂ.) ಸದಸ್ಯರು

1.	ಭೀಮಸಿ ಕಲಾದಗಿ	ಬಿಜಾಪುರ
2.	ಶ್ರೀಮತಿ ಹರಿಣಿ	ರಾಯಚೂರು
3.	ಟಿ. ಎಸ್. ಮಣಿ	ಕೆ. ಜಿ. ಎಫ್.
4.	ದೊರೆಸ್ವಾಮಿ	ಶಿಡ್ಲಘಟ್ಟ

ಅಲ್ಲದೆ ಬಾಗೆಪಲ್ಲಿಯಲ್ಲಿ 4, ಚಿತ್ರದುರ್ಗದಲ್ಲಿ 1, ಕುಣಿಗಲ್ ನಲ್ಲಿ 3 ಮಂದಿ ಆರಿಸಿಬಂದಿದ್ದಾರೆ.

ಹಿರೋಷಿಮಾ ದುರಂತದ ೩೮ನೇ ವರ್ಷ ಅಳಿಯದ ನೆನಪು

1945ರ ಆಗಸ್ಟ್ 6 ರಂದು ಜಪಾನಿನ ಎರಡು ಮಹಾನಗರಗಳಾದ ಹಿರೋಷಿಮಾ ಮತ್ತು ನಾಗಸಾಕಿಯ ಮೇಲೆ ಅಮೆರಿಕದ ಪಡೆಗಳು ಸ್ಫೋಟಿಸಿದ ಪರಮಾಣು ಬಾಂಬು 50 ಸಾವಿರ ಮಂದಿಯನ್ನು ನಿರ್ನಾಮಗೊಳಿಸಿತು. ಆ ದಾರುಣ ಘಟನೆಯನ್ನು ಜಪಾನಿಯರು ಪ್ರತಿ ವರ್ಷ ಆಗಸ್ಟ್ 6 ರಂದು ಗಾಢದುಃಖದಿಂದ ನೆನಪಿಸಿಕೊಳ್ಳುತ್ತಾರೆ

ಈ ಪ್ರಯುಕ್ತ ಹಿರೋಷಿಮಾದ ಶಾಂತಿ ಉದ್ಯಾನದಲ್ಲಿ ಬೃಹತ್ ಸಭೆಯೊಂದು ಸೇರಿತು. ನ್ಯೂಕ್ಲಿಯರ್ ಆಯುಧಗಳ ನಿಷೇಧವನ್ನು ಪ್ರತಿಪಾದಿಸುವ ಅಂತರರಾಷ್ಟ್ರೀಯ ಸಂಸ್ಥೆಯ ಪ್ರತಿನಿಧಿಗಳು ಮತ್ತು ದೇಶದಾದ್ಯಂತ ಇರುವ ಟ್ರೇಡ್ ಯೂನಿಯನ್‌ಗಳ ಪ್ರತಿನಿಧಿಗಳು ಸಾರ್ವಜನಿಕ ಸೇವಾಸಂಸ್ಥೆಗಳ ಪ್ರತಿನಿಧಿಗಳು ಭಾಗವಹಿಸಿದ್ದರು. ನ್ಯೂಕ್ಲಿಯರ್ ಯುದ್ಧದ ಬೆದರಿಕೆ ವಿರುದ್ಧ ಹೋರಾಟ ನಡೆಸಲು ಅಂತರರಾಷ್ಟ್ರೀಯ ಐಕ್ಯಮತ್ಯಕ್ಕಾಗಿ ಅವರು ಕರೆ ನೀಡಿದರು. ಈ ಸಭೆಯ ಮುಕ್ತಾಯದಲ್ಲಿ ನಡೆದ ಬೃಹತ್ ರ್‍ಯಾಲಿಯಲ್ಲಿ "ಶಾಂತಿ ಘೋಷಣೆ" ಯೊಂದನ್ನು ಅಂಗೀಕರಿಸಲಾಯಿತು, ಪ್ರತಿಯೊಂದು ಬಗೆಯ ನ್ಯೂಕ್ಲಿಯರ್ ಆಯುಧಗಳ ಉತ್ಪಾದನೆ ಮತ್ತು ಅವುಗಳನ್ನು ನೆಲೆಗೊಳಿಸುವುದನ್ನು ತಕ್ಷಣವೇ ಅಂತ್ಯಗೊಳಿಸಬೇಕು ಹಾಗೂ ನ್ಯೂಕ್ಲಿಯರ್ ಆಯುಧಗಳ ಪರೀಕ್ಷೆಯನ್ನು ಸಂಪೂರ್ಣವಾಗಿ ನಿಷೇಧಿಸಲು ಅಂತರರಾಷ್ಟ್ರೀಯ ಒಪ್ಪಂದವೊಂದು ಕೈಗೂಡಬೇಕು ಎಂದು ಈ ಶಾಂತಿ ಘೋಷಣೆ ಕರೆ ನೀಡಿದೆ.

ಮಂಗಳೂರು

ದ. ಕ. ಜಿಲ್ಲಾ ಎಸ್. ಎಫ್. ಐ. ಸಭೆ

ತಾರೀಕು॥ 6-8-1983 ರಂದು ನಡೆದ ಭಾರತ ವಿದ್ಯಾರ್ಥಿ ಫೆಡರೇಶನ್ (S.F.I.) ದಕ್ಷಿಣ ಕನ್ನಡ ಜಿಲ್ಲಾ ಸಮಿತಿಯ ಸಭೆ ಅಧ್ಯಕ್ಷ ವಿಶ್ವನಾಥರ ಅಧ್ಯಕ್ಷತೆಯಲ್ಲಿ ನಡೆಯಿತು. ರಾಜ್ಯ ಸಮಿತಿ ಅಧ್ಯಕ್ಷ ಆರ್. ಜಯಕುಮಾರ್ ರವರು ಸಭೆಯಲ್ಲಿ ಹಾಜರಿದ್ದರು. ಜಿಲ್ಲೆಯ ವಿದ್ಯಾರ್ಥಿಗಳನ್ನು ಕಾಡುವ ಹಲವಾರು ಸಮಸ್ಯೆಗಳನ್ನು ಚರ್ಚಿಸಿದ ಸಭೆಯು ಹೋರಾಟ ಕಾರ್ಯಕ್ರಮಗಳನ್ನು ರೂಪಿಸಿದೆ.

ಬೆಲೆಯೇರಿಕೆ ವಿರುದ್ಧ ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷ 10, 11, ರಂದು ನಡೆಸಲಿರುವ ಪಿಕೆಟಿಂಗ್ ಕಾರ್ಯಕ್ರಮಕ್ಕೆ S.F.I. ಜಿಲ್ಲಾ ಸಮಿತಿ ಸಂಪೂರ್ಣ ಬೆಂಬಲ ವ್ಯಕ್ತಪಡಿಸಿದ್ದು ಕಾರ್ಯಕ್ರಮದಲ್ಲಿ ಜಿಲ್ಲೆಯ ವಿದ್ಯಾರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕೆಂದು ಕರೆ ನೀಡಿದೆ.

ಕ್ಯಾಪಿಟೇಶನ್-ಡೊನೇಶನ್ ಪದ್ಧತಿಯ ವಿರುದ್ಧ ಪ್ರತಿಭಟನೆಯನ್ನು ವ್ಯಕ್ತಪಡಿಸಲು ಸೆಪ್ಟಂಬರ್ ಒಂದನೇ ತಾರೀಖಿನಂದು ಜಿಲ್ಲಾಧಿಕಾರಿಗಳ ಕಚೇರಿಗೆ ವಿದ್ಯಾರ್ಥಿಗಳ ಮೆರವಣಿಗೆಯನ್ನು ಏರ್ಪಡಿಸಲಾಗಿದೆ. ಈ ಸಂಬಂಧ ಜಿಲ್ಲಾಧಿಕಾರಿಗಳಿಗೆ ಮನವಿಯನ್ನು ಅರ್ಪಿಸಲಾಗುವುದು. ಪ್ರಾಥಮಿಕ ಶಾಲೆಗಳ ಪಠ್ಯ ಪುಸ್ತಕಗಳು ಜಿಲ್ಲೆಯಲ್ಲಿ ದೊರೆಯದಿರುವುದನ್ನು ಗಮನಿಸಿದ ಸಭೆಯು ಕೂಡಲೇ ಪುಸ್ತಕಗಳ ಸರಬರಾಜಿಗೆ ಸೂಕ್ತ ಕ್ರಮಗಳನ್ನು ಕೈಗೊಳ್ಳಲು ಸರಕಾರವನ್ನು ಒತ್ತಾಯಿಸಿತು.

ಮಂಗಳೂರು ವಿಶ್ವವಿದ್ಯಾನಿಲಯದ ಕನ್ನಡ ಎಂ. ಎ. ಗೆ 300 ಅಂಕಗಳ ಸಂಸ್ಕೃತವನ್ನು ನಿಗದಿ ಪಡಿಸಿರುವುದನ್ನು ಖಂಡಿಸಿದ ಸಭೆಯು, ಕನ್ನಡಕ್ಕೆ ಪ್ರಾಶಸ್ತ್ಯ ನೀಡಿ 100 ಅಂಕಗಳ ಸಂಸ್ಕೃತ ಪತ್ರಿಕೆಯನ್ನು ನಿಗದಿ ಪಡಿಸಬೇಕೆಂದು ಒತ್ತಾಯಿಸಿದೆ. ಹಾಗೂ ಉಪಕುಲಪತಿಗಳಿಗೆ ಮನವಿಯನ್ನು ಅರ್ಪಿಸಲು ನಿರ್ಧರಿಸಿದೆ.

ಜಿಲ್ಲೆಯಲ್ಲಿ ಖಾಲಿ ಇರುವ 1500 ಶಿಕ್ಷಕರ ಸ್ಥಾನಗಳನ್ನು ಕೂಡಲೇ ಭರ್ತಿ ಮಾಡಬೇಕೆಂದು ಜಿಲ್ಲಾ ಸಮಿತಿ ಸರಕಾರವನ್ನು ಆಗ್ರಹಿಸಿದೆ.

ಶ್ರೀಲಂಕಾದಲ್ಲಿ ನಡೆಯುತ್ತಿರುವ ಗಲಭೆಯನ್ನು ವಿಮರ್ಶಿಸಿದ ಸಮಿತಿಯು, ಅಲ್ಲಿನ ಅಲ್ಪಸಂಖ್ಯಾತ ತಮಿಳರ ಮೇಲೆ ನಡೆಯುತ್ತಿರುವ ಧಾಳಿಯನ್ನು ತೀವ್ರವಾಗಿ ಖಂಡಿಸಿತು. ಸಾಮ್ರಾಜ್ಯಶಾಹಿಗಳ ಹಿತಾಶಕ್ತಿಗೆ ಬಲಿಯಾಗಿರುವ ಜಯವರ್ಧನೆಯವರ ನೇತೃತ್ವದ ಸರಕಾರದ ಜನ ವಿರೋಧಿ ನೀತಿಯನ್ನು ಖಂಡಿಸಿದ ಸಮಿತಿಯು ಶ್ರೀಲಂಕಾದಲ್ಲಿ ಎಡ ಪಕ್ಷಗಳ ಮೇಲೆ ಹಾಕಿರುವ ನಿಷೇಧವು ಪ್ರಜಾಪ್ರಭುತ್ವ ವಿರೋಧಿ ಕ್ರಮವೆಂದು ಅಭಿಪ್ರಾಯ ಪಟ್ಟಿತು.

ಸ್ವಾತಂತ್ರ್ಯ ಚಳುವಳಿಯಲ್ಲಿ ಆಗಸ್ಟ್ 9 ಮತ್ತು ಕಮ್ಯುನಿಸ್ಟರ ಪಾತ್ರ

(4ನೇ ಪುಟದಿಂದ)

ಕಾಙ್ಷ್ಲಿ ಮುರಿದು ಚರಿತ್ರಾರ್ಹ ಗೋವಾಲಿಯೋ ಟ್ಯಾಂಕ್ ಮೈದಾನದಿಂದ ಧೀರೂಭಾಯಿ ದೇಸಾಯಿಯವರ ನೇತೃತ್ವದಲ್ಲಿ ಮೆರವಣಿಗೆ-ಸಭೆ ನಡೆಯಬೇಕಾಗಿತ್ತು. ಸಾವಿರಾರು ಜನ ಗೋವಾಲಿಯೋ ಟ್ಯಾಂಕ್ ಮೈದಾನದಲ್ಲಿ ಸೇರಿದ್ದರು. ಮೆರವಣಿಗೆ ಹೊರಟು ಕೆನಡೀ ಬ್ರಿಡ್ಜ್ ಮೇಲೆ ಹೋಗುತ್ತಿದ್ದಾಗ ಪೋಲೀಸರ ಲಾಠಿ ಛಾರ್ಜ್ ನಡೆಯಿತು. ಯಾರೂ ಚದುರಿಹೋಗಬಾರದೆಂಬ ಆದೇಶವಿತ್ತು. ನಾವೆಲ್ಲ ಹೋಗುತ್ತಿದ್ದಂತೆ ಲಾಠಿ ಏಟು, ಏಟನ್ನು ತಾಳಲಾರದೆ ಸ್ಮೃತಿತಪ್ಪಿ ಬಿದ್ದವರು ನೂರಾರು ಜನ. ಏಟು ತಿನ್ನುತ್ತಾ, ಕೈ, ಮೈಯಲ್ಲಿ ರಕ್ತ ಸುರಿಯುತ್ತಿದ್ದರೂ ಕೂಡ ನಾವು ಕೆಲವು ಜನ ಚೌಪಾಟಿ ಸೇರಿದೆವು ಬಂಧನಕ್ಕೊಳಗಾದೆವು. ನನ್ನಂತೆಯೇ ಹಲವಾರು ಜನರ ಮೈತುಂಬ ಲಾಠಿ ಏಟಿನ ಸಿಹಿ ನೋವು ಇಂದಿಗೂ ಜೀವಂತವಾಗುಳಿದಿದೆ.

ದೇಶದ ಸ್ವಾತಂತ್ರ್ಯ ಹೋರಾಟದ "ಅಹಿಂಸಾತ್ಮಕ" ಚಳುವಳಿಗೆ ಹೊಸ ತಿರುವು ಕೊಟ್ಟ ದಿವಸ ಆಗಸ್ಟ್ 9 ಎಂಬುದನ್ನು ಮರೆಯುವಂತಿಲ್ಲ. ಆಗಸ್ಟ್ 9, 1942 ರಲ್ಲಿ ಚಲೇ ಜಾವೋ ಚಳುವಳಿಯು ಹಿಂಸಾಸ್ವರೂಪ ತಾಳಿದ್ದರಿಂದಲೇ 1946ರಲ್ಲಿ ನಾವಿಕರ ಬಂಡಾಯವಾಯಿತು. ಆ ಬಂಡಾಯಕ್ಕೆ ಮುಂಬಯಿ, ಹಾಗೆಯೇ ಇತರ ಕೇಂದ್ರಗಳಲ್ಲಿ ಕಾರ್ಮಿಕರು ಬೆಂಬಲ ಕೊಡಲು ಬೀದಿಗಿಳಿದರು. ಬೀದಿ ಕಾಳಗ ನಡೆಸಿದರು. ಬ್ರಿಟಿಷರ ಗುಂಡಿಗೆ ನೂರಾರು ಕಾರ್ಮಿಕರು ಬಲಿಯಾದರು. ರಕ್ತ ಹೊಳೆಯಾಗಿ ಹರಿಯಿತು.

ಮಹಾತ್ಮಾ ಗಾಂಧಿಯವರ ಪ್ರತಿಭಟನೆಯನ್ನುಲ್ಲಂಘಿಸಿ, ದೇಶದ ಜನತೆ ಸ್ವಾತಂತ್ರ್ಯ ಹೋರಾಟಕ್ಕೆ ಹೊಸ ರೂಪ ಕೊಡಲು ಪ್ರಾರಂಭಿಸಿದಾಗ, ಕಾರ್ಮಿಕರೂ, ನಾವಿಕರೂ, ಪೋಲೀಸರೆಲ್ಲ ಪಾಲ್ಗೊಳ್ಳಲಿಕ್ಕೆ ಪ್ರಾರಂಭ ಮಾಡಿದಾಗ, ಇದರ ಗಾಂಭೀರ್ಯ, ಗಂಡಾಂತರವನ್ನರಿತ ಆಳುವ ಬ್ರಿಟಿಷರು ಅಧಿಕಾರ ಹಸ್ತಾಂತರಕ್ಕೆ ಒಪ್ಪಿಕೊಳ್ಳಬೇಕಾಯಿತು. ಸ್ವಾತಂತ್ರ್ಯಕ್ಕಾಗಿ ನಡೆದಿರುವ ಚಳುವಳಿ ಇನ್ನೂ ಕೆಲವು ವರ್ಷ ಮುಂದುವರಿದದ್ದೇ ಆದರೆ ಈ ಹೋರಾಟದ ಮುಖಂಡತ್ವ ಬಂಡವಾಳದಾರರ ಕೈತಪ್ಪಬಹುದೆಂದು ತಿಳಿದೇ, ಬ್ರಿಟಿಷರು ಅಪಾಯಕಾರಿಯಲ್ಲದ ಕಾಂಗ್ರೆಸ್ಸಿಗೆ ಅಧಿಕಾರ ಹಸ್ತಾಂತರ ಮಾಡಿದರು. ಈ ರೀತಿ ಶಾಂತಿಯುತವಾಗಿ ಅಧಿಕಾರ ಹಸ್ತಾಂತರವಾಗಿರುವುದರಿಂದಲೇ, ಕಾಂಗ್ರೆಸ್ ಸರಕಾರ ಕಾಮನ್‌ವೆಲ್ತಿನ ಸಂಬಂಧ ಕಡಿದುಕೊಂಡಿಲ್ಲ, ಬಂಡವಾಳಶಾಹಿ ದೇಶಗಳೊಡನಿರುವ ಆರ್ಥಿಕ ರಾಜಕೀಯ ಸಂಬಂಧವನ್ನು ಬಿಟ್ಟುಕೊಟ್ಟಿಲ್ಲ. ಆ ಕಾರಣದಿಂದಲೇ, ಸ್ವಾತಂತ್ರ್ಯ ಪಡೆದು 35 ವರ್ಷಗಳಾಗಿಸಿದರೂ ಕೂಡ, ನಿರುದ್ಯೋಗ, ಬೆಲೆಯೇರಿಕೆ, ಔದ್ಯಮಿಕವಾಗಿ ಹಿಂದುಳಿಯುವಿಕೆ, ಬಡತನಗಳನ್ನೆಲ್ಲಾ ದೂರ ಮಾಡಲು ಸಾಧ್ಯವಾಗುತ್ತಿಲ್ಲ.

ಬಂಡವಾಳಶಾಹಿ ಅಧಿಕಾರ ಹಸ್ತಾಂತರಕ್ಕೂ, ಕಾರ್ಮಿಕ ವರ್ಗದ ಕ್ರಾಂತಿಗೂ ಇರುವ ವ್ಯತ್ಯಾಸವಿದು.

ಸಮತಾವಾದಕ್ಕಾಗಿ ನಾವು ನಡೆಸುತ್ತಿರುವ ಹೋರಾಟದಲ್ಲಿ ಆಗಸ್ಟ್ 9ರ ಹೋರಾಟದ ಅನುಭವಗಳೂ ಸಹಾಯವಾಗಬಲ್ಲವು. ಅವುಗಳನ್ನು ತಿಳಿದು, ಅರಗಿಸಿ ಕೊಳ್ಳಲು ಪ್ರಯತ್ನಿಸೋಣ.

ಸವದತ್ತಿ

ಬೇಡಿಕೆ ದಿನಾಚರಣೆ

ಎಸ್. ಎಫ್. ಐ. ರಾಜ್ಯ ಸಮಿತಿಯು ಕೊಟ್ಟ ಕರೆಯ ಮೇರೆಗೆ ಸವದತ್ತಿಯಲ್ಲಿ ದಿನಾಂಕ 1-8-83 ರಂದು ವಿದ್ಯಾರ್ಥಿಗಳು "ಬೇಡಿಕೆ ದಿನಾಚರಣೆ" ಯನ್ನು ಆಚರಿಸಿದರು. ಕಾರ್ಯಕ್ರಮದ ಅಂಗವಾಗಿ ಎಸ್. ಎಫ್. ಐ. ಸದಸ್ಯರು ಸ್ಥಳೀಯ ಎಸ್. ವಿ. ಎಸ್. ಬಿ. ಕಲಾ ಮತ್ತು ವಾಣಿಜ್ಯ ಮಹಾ ವಿದ್ಯಾಲಯ ಎಸ್. ಕೆ. ಸಂಯುಕ್ತ ಕಿರಿಯ ಮಹಾ ವಿದ್ಯಾಲಯ ಹಾಗೂ ಹೆಣ್ಣು ಮಕ್ಕಳ ಮಾಧ್ಯಮಿಕ ಶಾಲೆಗಳ ಎದುರು ಮತಪ್ರದರ್ಶನ ನಡೆಸಿದರು. ಮೂರೂ ವಿದ್ಯಾಸಂಸ್ಥೆಗಳ ವಿದ್ಯಾರ್ಥಿ ವಿದ್ಯಾರ್ಥಿನಿಯರು ವರ್ಗಗಳನ್ನು ಬಹಿಷ್ಕರಿಸಿ ಮತಪ್ರದರ್ಶನದಲ್ಲಿ ಪಾಲಗೊಂಡರು. ಮೂರೂ ವಿದ್ಯಾ ಸಂಸ್ಥೆಗಳ ಪ್ರಾಚಾರ್ಯರು, ಉಪನ್ಯಾಸಕರು ಶಿಕ್ಷಕ ಹಾಗೂ ಶಿಕ್ಷಕೇತರ ನೌಕರರು ವಿದ್ಯಾರ್ಥಿಗಳ ಹೋರಾಟಕ್ಕೆ ಬೆಂಬಲ ಸೂಚಿಸಿದರು. ಹೋರಾಟದ ಎರಡನೆಯ ಹಂತದ ಕಾರ್ಯಕ್ರಮವಾಗಿ ಸೆಪ್ಟೆಂಬರ್ 1ರಂದು ತಹಶೀಲದಾರರಿಗೆ ಮನವಿ ಸಲ್ಲಿಸಲಾಗುವುದು. ಮುಂದೆ ಸೆಪ್ಟೆಂಬರ್ 15 ರಂದು ಜಿಲ್ಲಾಧಿಕಾರಿಗಳ ಕಚೇರಿಯ ಎದುರು ವಿದ್ಯಾರ್ಥಿಗಳು ಸಾಮೂಹಿಕ ಮತಪ್ರದರ್ಶನ ನಡೆಸುವರು.

ಲೇಂಗಟಿ ಗ್ರಾಮ ರೈತ ಸಂಘ ರಚನೆ

ದಿನಾಂಕ 3-8-83 ರಂದು ಆಳಂದ ತಾಲ್ಲೂಕಿನ ಲೇಂಗಟಿ ಗ್ರಾಮದಲ್ಲಿ ಕರ್ನಾಟಕ ಪ್ರಾಂತ ರೈತ ಸಂಘದ ಗ್ರಾಮೀಣ ಘಟಕವನ್ನು ಜಿಲ್ಲಾ ಕಾರ್ಯದರ್ಶಿ, ಕಾ॥ ಕಲ್ಲಪ್ಪ ಕಿರಣಗಿಯವರ ಅಧ್ಯಕ್ಷತೆಯಲ್ಲಿ ರಚಿಸಲಾಯಿತು.

ಪದಾಧಿಕಾರಿಗಳಾಗಿ— ಅಧ್ಯಕ್ಷರು — ಕಾ। ಹನುಮಂತರಾವ್ ತಾಡಮತಿ, ಉಪಾಧ್ಯಕ್ಷರಾಗಿ ಮಲ್ಲಿಕಾರ್ಜುನ ಹಳಕೆ ಮತ್ತು ಬಸವರಾಜ ಗೌಂಡಿ ಪ್ರಕಾರ್ಯದರ್ಶಿಯಾಗಿ ಭೀಮರಾವ ಕೂಳ್ಳೂರ, ಸಹಕಾರ್ಯದರ್ಶಿಗಳಾಗಿ ಮಸ್ತಾನಸಾಬ ಪಠಾಣ ಮತ್ತು ಮಾಳಪ್ಪ ಗದ್ದಿ ಮತ್ತು ಖಜಾಂಚಿಯಾಗಿ ಶಿವಾನಂದ ಗುಡಗೆ ಆಯ್ಕೆಯಾದರು.

ಹರಪ್ಪನಹಳ್ಳಿ :

ಹಾಸ್ಟಲ್ ವಿದ್ಯಾರ್ಥಿಗಳಿಂದ ಬೃಹತ್ ಮೆರವಣಿಗೆ

ಹರಪನಹಳ್ಳಿ ತಾಲ್ಲೂಕಿನಲ್ಲಿ ದಿ. 25-7-1983ರಂದು ಬಿ. ಸಿ. ಎಂ. ಹಾಗೂ ಟಿ. ಎಂ. ಇ. ಎ. ಸೊಸೈಟಿ ಮತ್ತು ಎಸ್. ಟಿ. ಹಾಸ್ಟೆಲ್ ವಿದ್ಯಾರ್ಥಿಗಳು 1) ಹಾಸ್ಟಲ್ ಸೋರುವುದರ ರಿಪೇರಿ, 2) ಅಕ್ಕಿಯನ್ನು ಸೊಸೈಟಿಯಿಂದ ಒದಗಿಸಬೇಕು, 3) ಮುರಿದ ಪೆಟ್ಟಿಗೆಗಳ ರಿಪೇರಿ, 4) ಪ್ರತಿ ವರ್ಷ ವಿದ್ಯಾರ್ಥಿಗಳ ವೈದ್ಯಕೀಯ ತಪಾಸಣೆಗೆ ಬಂದ ಗ್ರಾಂಟನ್ನು ವಿದ್ಯಾರ್ಥಿಗಳಿಗೆ ಮುಟ್ಟಿಸಬೇಕು, 5) ಮಧ್ಯಾಹ್ನ ಟಿಫನ್ ಕೊಡಬೇಕು, 6) ಹಾಸ್ಟಲ್‌ಗಳಲ್ಲಿ ಜಾತೀಯತೆ ನಿಲ್ಲಿಸಬೇಕು,

ಈ ಆರು ಸಮಸ್ಯೆಗಳ ಪರಿಹಾರಕ್ಕೆ ಒತ್ತಾಯಿಸಿ ತಹಶೀಲ್ದಾರರಿಗೂ ಮತ್ತು ಬಿ. ಡಿ. ಓ ರವರಿಗೂ ಮನವಿ ಸಲ್ಲಿಸಿದರು.

ಇದರ ನೇತೃತ್ವವನ್ನು ಅಧ್ಯಕ್ಷರಾದ ಕಾ॥ ಕೃಷ್ಣಾಜಿಕಲಾಲ್, ಕಾರ್ಯದರ್ಶಿಯಾದ ಪಿ. ಸುರೇಶ್, ಕಾ॥ ಎಚ್. ಎಂ. ಕರಿಬಸಪ್ಪ, ಕಾ॥ ಪರಶುರಾಮ್ ಇವರುಗಳು ವಹಿಸಿದ್ದರು. ಅಧಿಕಾರಿಗಳು ಬೇಗನೆ ಬಗೆಹರಿಸುವುದಾಗಿ ಆಶ್ವಾಸನೆ ನೀಡಿದ್ದಾರೆಂದು ವರದಿ ತಿಳಿಸಿದೆ.

ಎಸ್. ಎಫ್. ಐ. ನಿಂದ ಮನವಿ

ಶಿಕ್ಷಣ ರಂಗದಲ್ಲಿ ಕ್ಯಾಪಿಟೇಶನ್-ಡೊನೇಶನ್‌ಗಳ ಬಗ್ಗೆ ಕರ್ನಾಟಕ ರಾಜ್ಯ ಸರಕಾರವು ತೆಗೆದುಕೊಂಡ ನಿರ್ಣಯವನ್ನು ಖಂಡಿಸಿತು. ಮತ್ತು ಇದರ ಜೊತೆಗೆ ಡೊನೇಶನ್/ಕ್ಯಾಪಿಟೇಶನ್ ಫೀ ಪದ್ಧತಿ ರದ್ದುಗೊಳಿಸಬೇಕು. ಖಾಸಗಿ ವಿದ್ಯಾ ಸಂಸ್ಥೆಗಳು ರಾಷ್ಟ್ರೀಕರಣವಾಗಬೇಕು. ಎಲ್ಲಾ ತಾಲ್ಲೂಕು ಕೇಂದ್ರಗಳಲ್ಲಿ ಹೆಚ್ಚು ಹೆಚ್ಚು ಉಚಿತ ಹಾಸ್ಟಲ್‌ಗಳನ್ನು ತೆರೆಯಬೇಕು. ಖಾಸಗೀ ಕಾಲೇಜುಗಳಲ್ಲಿ ಮತ್ತು ಹಾಸ್ಟಲ್‌ಗಳಲ್ಲಿ ವಿದ್ಯಾರ್ಥಿಗಳ ಮೇಲೆ ನಡೆಯುವ ಶೋಷಣೆಯನ್ನು ತಡೆಗಟ್ಟಬೇಕು. ಹಡಗಲಿಯಲ್ಲಿ ಎಸ್. ಎಫ್. ಐ. ಕಾರ್ಯಕರ್ತರ ಮೇಲೆ ಕಾಂಗ್ರೆಸ್ ಗೂಂಡಾಗಳು, ಆರ್. ಎಸ್. ಎಸ್. ನವರು ಮತ್ತು ಮತೀಯ ವಾದಿಗಳು ಹಲ್ಲೆ ನಡೆಸಿ; ಸಂಘಟನೆಯನ್ನು ಹತ್ತಿಕ್ಕಲಿಕ್ಕೆ ಪ್ರಯತ್ನ ಮಾಡುತ್ತಿದ್ದಾರೆ. ಆದ್ದರಿಂದ ಹೂವಿನ ಹಡಗಲಿಯಲ್ಲಿ ಎಸ್. ಎಫ್. ಐ. ಸಂಘಟನೆಯನ್ನು ಬೆಳಸಲು ಅವಕಾಶ ಇಲ್ಲದಾಗಿದೆ. ಅದಕ್ಕೆ ತಾವುಗಳು ಈ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕು ಎಂದೂ, ಅವುಗಳನ್ನು ಸಂಪೂರ್ಣ ರದ್ದುಪಡಿಸಲು ಎಸ್. ಎಫ್. ಐ. ಹರಪನಹಳ್ಳಿ ಘಟಕ ಮುಖ್ಯಮಂತ್ರಿ ಶ್ರೀ ರಾಮಕೃಷ್ಣ ಹೆಗಡೆಯವರಿಗೆ 16-7-83 ರಂದು ಮನವಿಯನ್ನು ಅರ್ಪಿಸಿತು.

ನಾಗನಾಯಕನ ಕೋಟಿ

ರೈತರ ಮೇಲೆ ಹಲ್ಲೆ

ತಾ॥ 10-7-83 ರಂದು ನಾಗನಾಯಕನ ಕೋಟೆಯಲ್ಲಿ ಹೊಸಕೋಟೆ ತಾಲ್ಲೂಕಿನ ರೈತರ ಸಭೆ ನಡೆಯುತ್ತಿರುವಾಗ ರಾತ್ರಿ ಸುಮಾರು 12 ಘಂಟೆ ಸಮಯದಲ್ಲಿ ಬೆಂಗಳೂರಿನಿಂದ ಸೈಕಲ್ ಮೋಟರ್ ಸ್ಕೂಟರ್ ವ್ಯಾನ್‌ಗಳಲ್ಲಿ ಗೂಂಡಾಗಳನ್ನು ಕರೆತಂದು ರೈತ ಸಂಘದವರನ್ನು ಕೊಲೆ ಮಾಡಲು ಯತ್ನಿಸಿ ರೈತ ಸಂಘದ ಕಾರ್ಯಕರ್ತರಾದ ಆಪ್ಪಯ್ಯನವರನ್ನು ಮಚ್ಚಿನಿಂದ ಹೊಡೆದಾಗ ಅವರು ತಪ್ಪಿಸಿಕೊಂಡು ಮಚ್ಚನ್ನು ಕಿತ್ತುಕೊಂಡರು. ಸ್ಕೂಟರ್‌ನ್ನು ವಶಪಡಿಸಿಕೊಂಡು ಕೇಸು ಕಾಡುಗೋಡಿ ಪೋಲೀಸ್ ಠಾಣೆಯಲ್ಲಿ ದಾಖಲಾಗಿದೆ ಆದರೆ ಇದರಿಂದ ತೃಪ್ತರಾಗದ ಕಾಂಗ್ರೆಸಿನವರು ತಾ॥ 28-7-83 ರಂದು ಅನುಗೊಂಡನಹಳ್ಳಿಗೆ ಕಾರ್ಯನಿಮಿತ್ತವಾಗಿ ಹೋಗಿದ್ದ ರೈತ ಸಂಘದ ಮುಖಂಡನಾದ ಕಾ। ಮುನಿಶಾಮಿಯವರನ್ನು ಕಾಂಗ್ರೆಸ್‌ನವರೆನ್ನಲಾದ ಗೋಪಾಲ್, ಪಿ. ಆರ್. ನಂಜುಂಡಯ್ಯ, ರಾಮರೆಡ್ಡಿ ಮತ್ತಿತರರು ಗುಂಪು ಕಟ್ಟಿಕೊಂಡು ಚೆನ್ನಾಗಿ ಥಳಿಸಿ ಹಲ್ಲೆ ಮಾಡಿರುತ್ತಾರೆ. ರೈತ ಸಂಘವು ಈ ಪ್ರಾಂತ್ಯದಲ್ಲಿ ಬಲಿಷ್ಠವಾಗಿ ಬೆಳೆಯುತ್ತಿರುವುದನ್ನು ಸಹಿಸಲಾರದ ಶ್ರೀಮಂತರು ಹಾಗೂ ಕಾಂಗ್ರೆಸ್‌ನವರು ರೈತ ಸಂಘವನ್ನು ಮುರಿಯಲು ಪ್ರಯತ್ನಿಸಿರುತ್ತಾರೆ. ಈ ಸಂಬಂಧವಾಗಿ ಕಂಪ್ಲೈಂಟ್ ಕೊಟ್ಟಿದ್ದರೂ ಯಾವ ರೀತಿಯಲ್ಲೂ ಪ್ರಯೋಜನವಾಗದೆ ಅವರ ದಬ್ಬಾಳಿಕೆ ಮುಂದುವರಿಯುತ್ತಿದೆ. ಆದ್ದರಿಂದ ತಾಲ್ಲೂಕು ರೈತ ಸಂಘವು ಸಭೆ ಸೇರಿ ಕಾ॥ ಮುನಿಶಾಮಿಯವರ ಮೇಲಾದ ಹಲ್ಲೆಯನ್ನು ಖಂಡಿಸಲು ತಾ॥ 4-8-83 ರಂದು ಪ್ರತಿಭಟನಾ ಮೆರವಣಿಗೆಯನ್ನು ನಡೆಸಲು ತೀರ್ಮಾನಿಸಿರುತ್ತೆ.

ಆಳಂದ :

ರೈತರಿಂದ ಜಾಥಾ ಕಾರ್ಯಕ್ರಮ

ದಿ. 10-8-83ರಿಂದ 11-8-83 ರವರೆಗೆ ಆಳಂದ ತಾಲ್ಲೂಕಿನ ರೈತರು ಕರ್ನಾಟಕ ಪ್ರಾಂತ ರೈತ ಸಂಘ, ಆಳಂದ ತಾಲ್ಲೂಕು ಘಟಕದಾಶ್ರಯದಲ್ಲಿ ಜಾಥಾದ ಮೂಲಕ ನಡೆದು ತಹಶೀಲ್ ಕಛೇರಿ ಎದುರು ಬೆಲೆ ಏರಿಕೆ ವಿರೋಧಿ ದಿನಾಚರಣೆ ಸಂದರ್ಭದಲ್ಲಿ ಎರಡು ದಿವಸಗಳ ಧರಣಿ ಸತ್ಯಾಗ್ರಹ ನಡೆಸಲಿದ್ದಾರೆ. ಜಾಥಾ ಕಾರ್ಯಕ್ರಮದಲ್ಲಿ ಅಂಬಲಗಾ, ಕಡುಮುಡಗಿ, ಲೇಂಗಟಿ, ಕಲಗುಟಿಗಿ, ಧವಸ್ಮಾರ, ಮಡಕಿ, ಮುಗಳಿ, ಸಲಗರ ಮುನವಿಗಿ, ಕಮಲಾನಗರ, ನರೋಣಾ, ಬೋದಾಗ, ತೆಲ್ಲೂರ, ಮತ್ತು ಕಡಗಂಚಿ ಗ್ರಾಮಗಳ ಸುಮಾರು ಐದು ನೂರಕ್ಕೂ ಹೆಚ್ಚು ರೈತರು ಭಾಗವಹಿಸುವರೆಂದು ಪ್ರಕಟಣೆ ತಿಳಿಸಿದೆ.

ಹರಿಜನ, ಗಿರಿಜನರ ವಿರುದ್ಧ ಅಪರಾಧ ಎಸಗುವಲ್ಲಿ ಕಾಂಗ್ರೆಸ್ (ಐ) ರಾಜ್ಯಗಳಿಗೆ ಸರಿಸಾಟಿಯಿಲ್ಲ !

ಈ ವರ್ಷದ ಮೊದಲೆರಡು ತಿಂಗಳಲ್ಲಿ ಪರಿಶಿಷ್ಟ ಜಾತಿಗಳ ಸದಸ್ಯರ ಮೇಲೆ ಎಸಗಿರುವ ಅಪರಾಧಗಳ ಸಂಖ್ಯೆಯಲ್ಲಿ ಪ್ರಥಮ ಸ್ಥಾನ ಮಧ್ಯಪ್ರದೇಶಕ್ಕೆ ಸಲ್ಲುತ್ತದೆ. ನಂತರ ಅನುಕ್ರಮವಾಗಿ ಉತ್ತರಪ್ರದೇಶ, ರಾಜಸ್ಥಾನ ಹಾಗೂ ಬಿಹಾರದ ಸ್ಥಾನ. ಈ ನಾಲ್ಕು ರಾಜ್ಯಗಳಲ್ಲಿ ಈ ಎರಡು ತಿಂಗಳಲ್ಲಿ ದಾಖಲಾದ ಇಂತಹ ಅಪರಾಧಗಳ ಸಂಖ್ಯೆ ಅನುಕ್ರಮವಾಗಿ 791, 656, 230 ಹಾಗೂ 119 ಇವೆಲ್ಲಾ ಕಾಂಗ್ರೆಸ್ (ಐ) ಆಳುತ್ತಿರುವ ರಾಜ್ಯಗಳು. ಎಡರಂಗದ ಆಳ್ವಿಕೆಯಿರುವ ತ್ರಿಪುರಾ ಹಾಗೂ ಪಶ್ಚಿಮ ಬಂಗಾಳದಲ್ಲಿ ಕಳೆದೆರಡು ತಿಂಗಳಲ್ಲಿ ಈ ಸಂಖ್ಯೆ ಸೊನ್ನೆ.

ಅದೇ ರೀತಿ ಕಳೆದ ವರ್ಷದ ಅಂತ್ಯದವರೆಗೆ ಹರಿಜನರ ಮೇಲೆಸಗಿದ ಅಪರಾಧಗಳ ಸಂಖ್ಯೆಯಲ್ಲೂ ಈ ನಾಲ್ಕು ಕಾಂಗ್ರೆಸ್ (ಐ) ಆಳ್ವಿಕೆಯ ರಾಜ್ಯಗಳದ್ದೇ 'ಮೇಲುಗೈ'. ಉತ್ತರ ಪ್ರದೇಶ, ಮಧ್ಯ ಪ್ರದೇಶ, ಬಿಹಾರ ಹಾಗೂ ರಾಜಸ್ಥಾನಗಳಲ್ಲಿ ಈ ಸಂಖ್ಯೆ ಅನುಕ್ರಮವಾಗಿ 1123, 1112, 494 ಮತ್ತು 416. ಎಡರಂಗ ಆಳ್ವಿಕೆಯ ರಾಜ್ಯಗಳಾದ ಪಶ್ಚಿಮಬಂಗಾಳ ಹಾಗೂ ತ್ರಿಪುರಾದಲ್ಲಿ ಈ ಸಂಖ್ಯೆ ಅನುಕ್ರಮವಾಗಿ 6 ಮತ್ತು 1. ಇತರ ಕಾಂಗ್ರೆಸ್ಸೇತರ ಪಕ್ಷಗಳ ಆಳ್ವಿಕೆಯಲ್ಲಿರುವ ತಮಿಳುನಾಡು ಹಾಗೂ ಜಮ್ಮು-ಕಾಶ್ಮೀರದಲ್ಲಿ ಈ ಸಂಖ್ಯೆ 33 ಮತ್ತು 4. ಹರಿಕಿಷನ್ ಸಿಂಗ್ ಸುರ್‌ಜೀತ್‌ರವರು ಕೇಳಿದ ಪ್ರಶ್ನೆಗೆ ಉತ್ತರವಾಗಿ ಕೇಂದ್ರ ಸರಕಾರ ಗೃಹ ಮಂತ್ರಾಲಯದ ಸಲಹಾ ಸಮಿತಿಗೆ ಸಲ್ಲಿಸಿದ ಟಿಪ್ಪಣಿಯಿಂದ ಈ ಅಂಶ ವ್ಯಕ್ತಗೊಂಡಿದೆ.

ಅದೇ ರೀತಿ ಸಂಸತ್ ಸದಸ್ಯ ನೀರೆನ್ ಘೋಷ್ ಎತ್ತಿದ ಪ್ರಶ್ನೆಗೆ ಉತ್ತರವಾಗಿ ಸರಕಾರ ನೀಡಿರುವ ಹೇಳಿಕೆ ಪ್ರಕಾರ ಪರಿಶಿಷ್ಟ ಜನಾಂಗ ಅಥವಾ ಗಿರಿಜನರ ಮೇಲೆ ನಡೆಯುತ್ತಿರುವ ಹಲ್ಲೆಗಳ ಸಂಖ್ಯೆಯಲ್ಲೂ ಈ ಕಾಂಗ್ರೆಸ್ (ಐ) ಆಳ್ವಿಕೆಯ ರಾಜ್ಯಗಳು ತಮ್ಮ 'ಮೇಲ್ಮೆ'ಯನ್ನು ಕಾದುಕೊಂಡಿವೆ ! ಆ ಹೇಳಿಕೆಯ ಪ್ರಕಾರ ಈ ರಾಜ್ಯಗಳಲ್ಲಿ ಇಂತಹ ಅಪರಾಧಗಳ ಸಂಖ್ಯೆ ವರ್ಷದಿಂದ ವರ್ಷಕ್ಕೆ ಏರುತ್ತಿದೆ.

ಈ ದೇಶದ ದಲಿತ ವರ್ಗಗಳ ಉದ್ಧಾರ ಕೇವಲ ತನ್ನಿಂದ ಮಾತ್ರ ಎಂದು ತುತ್ತೂರಿ ಊದುತ್ತಿರುವ ಇಂದಿರಾ ಸರಕಾರದ ಆಳ್ವಿಕೆಯಲ್ಲಿ ಈ ದುರ್ಬಲ ವರ್ಗಗಳ ವಾಸ್ತವ ಪರಿಸ್ಥಿತಿಯಿದು. ಭೂಮಾಲಕ ವರ್ಗದ ಹಿತಾಸಕ್ತಿ ಕಾಪಾಡಲೆಂದೇ ಇರುವ ಸರಕಾರ ಆ ಭೂಮಾಲಕರ ಶೋಷಣೆಗೆ ಒಳಗಾಗಿರುವವರ ಬಗ್ಗೆ ಇದಕ್ಕಿಂತ ಭಿನ್ನವಾದ ಧೋರಣೆಯನ್ನು ಎಂದಾದರೂ ಹೇಗೆ ತಾನೇ ತಳೆದೀತು ?

ದ. ಕ. ಸಹಸ್ರಾರು ಬಂಧನ

(1ನೇ ಪುಟದಿಂದ)

ರಾಜು ಮಾಡಬೇಕೆಂಬ ಹಲವಾರು ಬೇಡಿಕೆಗಳ ಸಲುವಾಗಿ ತಾ। 10-11 ರಂದು ದ.ಕ. ಜಿಲ್ಲಾದ್ಯಂತ ತಾಲ್ಲೂಕು ಮತ್ತು ಜಿಲ್ಲಾ ಕಚೇರಿಗಳ ಮುಂದೆ ಸಾಮೂಹಿಕ ಸತ್ಯಾಗ್ರಹ ಮಾಡಲಾಯಿತು. ಏಳೆಂಟು ಸಾವಿರಕ್ಕೂ ಹೆಚ್ಚು ಜನ-ನೂರಾರು ಮಹಿಳೆಯರ ಪಾಲ್ಗೊಂಡು ಸತ್ಯಾಗ್ರಹದಲ್ಲಿ ಭಾಗವಹಿಸಿ, ಬಂಧನಕ್ಕೊಳಗಾಗಿದ್ದಾರೆ.

ಜನರು ಎದುರಿಸುತ್ತಿರುವ ತುರ್ತು ಸಮಸ್ಯೆಗಳ ಕುರಿತು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಾರ್ಟಿ ಯಾವ ರೀತಿ ಸಂಘಟಿತ ಹೋರಾಟ ನಡೆಸಬಲ್ಲದೆಂಬುದನ್ನ ದ.ಕ. ಜಿಲ್ಲೆಯ ಜನರಿಗೆ ಈ ಹೋರಾಟ ತೋರಿಸಿ ಕೊಟ್ಟಿದೆ. ಇಂಥ ಹೋರಾಟಗಳನ್ನು ವಿಸ್ತಾರಗೊಳಿಸಿ ತೀವ್ರಗೊಳಿಸಿದರೆ ಬಂಡವಾಳಶಾಹಿ ಸರಕಾರಗಳಿಂದಲೂ ಸ್ವಲ್ಪ ಪರಿಹಾರ ಪಡೆಯಲುಸಾಧ್ಯವೆಂದು ದ.ಕ. ಜಿಲ್ಲೆಯ ಈ ಹೋರಾಟ ತೋರಿಸಿ ಕೊಟ್ಟಿದೆ.

ಸುಸಂಘಟಿತ ರೀತಿಯಲ್ಲಿ ಸಾಮೂಹಿಕ ಚಟುವಟಿಕೆಯನ್ನು ಅತ್ಯಂತ ಪರಿಣಾಮಕಾರಿಯಾಗಿ ನಡೆಸಿದ ದ.ಕ. ಜಿಲ್ಲೆಯ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಾರ್ಟಿಯನ್ನು ರೈತ-ಕಾರ್ಮಿಕರನ್ನು ಈ ಚಟುವಟಿಕೆಗೆ ಬೆಂಬಲನೀಡಿದ ಎಲ್ಲ ಜನತೆಯನ್ನು ಸಿಪಿಐ (ಎಂ) ಕರ್ನಾಟಕ ರಾಜ್ಯ ಸಮಿತಿ ಅಭಿನಂದಿಸುತ್ತದೆ. (ಜಿಲ್ಲೆಯ ಮತ್ತಿತರ ಕಡೆಗಳಲ್ಲೂ ಬೆಲೆಯೇರಿಕೆ ವಿರೋಧಿ ಕಾರ್ಯಕ್ರಮ ನಡೆದ ವರದಿಗಳನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು.)

ಶ್ರೀಲಂಕಾದಲ್ಲಿ ನರಮೇಧ

ಐದು ಎಡಪಕ್ಷಗಳ ಪ್ರತಿಭಟನೆ

ಸಿ.ಪಿ.ಐ. (ಎಂ.)ನ ಕಾ॥ ನಂಬೂದಿರಿಪಾಡ್, ಸಿ.ಪಿ.ಐ.ನ ಕಾ॥ ರಾಜೇಶ್ವರರಾವ್, ಎನ್. ಕೆ. ಕೃಷ್ಣನ್ ಹಾಗೂ ಎ. ಬಿ. ಬರ್ಧನ್, ಆರ್. ಎಸ್. ಪಿ. ಯ ಕಾ॥ ತ್ರಿದಿಬ್ ಚೌದರಿ ಡಿ. ಎಸ್. ಪಿ. ಯ ಕಾ॥ ರಘುನಾಥರೆಡ್ಡಿ ಹಾಗೂ ಫಾರ್ವರ್ಡ್ ಬ್ಲಾಕ್‌ನ ಕಾ। ಡಿ.ಡಿ. ಶಾಸ್ತ್ರಿ ನವದೆಹಲಿಯಲ್ಲಿ ಆಗಸ್ಟ 5ರ ಬೆಳಿಗ್ಗೆ ಸಭೆ ಸೇರಿ ಶ್ರೀಲಂಕಾದ ಘಟನೆಗಳ ಬಗ್ಗೆ ಕೆಳಗಿನ ಪತ್ರಿಕಾ ಪ್ರಕಟಣೆ ನೀಡಿದ್ದಾರೆ.

"ಸಿ.ಪಿ.ಐ. (ಎಂ.) ಸಿ.ಪಿ.ಐ. ಆರ್. ಎಸ್.ಪಿ., ಡಿ.ಎಸ್.ಪಿ. ಹಾಗೂ ಫಾರ್ವರ್ಡ್ ಬ್ಲಾಕ್‌ನ ಈ ಸಭೆ ಶ್ರೀಲಂಕಾದ ತಮಿಳರ ಭಾರತೀಯ ಮೂಲದ ಜನತೆಯ ಸಾಮೂಹಿಕ ಹತ್ಯೆಗೆ ಹಾಗೂ ಆಸ್ತಿ ವಿನಾಶಕ್ಕೆಡೆ ಮಾಡಿಕೊಟ್ಟ ಇತ್ತೀಚಿನ ಬೆಳವಣಿಗೆಗಳ ಬಗ್ಗೆ ತನ್ನ ತೀವ್ರ ಕಳವಳ ಹಾಗೂ ಆತಂಕವನ್ನು ವ್ಯಕ್ತಪಡಿಸುತ್ತದೆ. ಸಾವಿರಾರು ಜನ ನಿರ್ವಸಿತರಾಗಿದ್ದಾರೆ. ನಿರಾಶ್ರಿತರ ಶಿಬಿರಗಳ ಜನರ ಪರಿಸ್ಥಿತಿ ಭಯಾನಕವಾಗಿದೆ. ಮಾನವ ಹಕ್ಕುಗಳ ನೇರ ಉಲ್ಲಂಘನೆಯ ಸ್ಪಷ್ಟ ಉದಾಹರಣೆಯಿದು.

ಶ್ರೀಲಂಕಾದ ತಮಿಳರ ಹಾಗೂ ಭಾರತೀಯ ಮೂಲದ ಜನರ ಸಮಸ್ಯೆಗಳಿಗೆ ಪ್ರಜಾಸತ್ತಾತ್ಮಕ ಹಾಗೂ ರಾಜಕೀಯ ಪರಿಹಾರ ಕಂಡುಹಿಡಿದು ಅವರ ವಿರುದ್ಧ ಹಿಂಸಾಚಾರವನ್ನು ನಿಲ್ಲಿಸುವ ಬದಲು ಜಯವರ್ಧನೆ ಸರ್ಕಾರ ಹಿಂಸಾಚಾರಕ್ಕೆ ಕುಮ್ಮಕ್ಕು ನೀಡಿದೆ. ಹಾಗೂ ಈ ಹೊಲಸು ಘಟನೆಗಳ ನೆವ ಮಾಡಿ ಎಡ ಪಕ್ಷಗಳ ಮೇಲೆ ಪ್ರತಿಬಂಧ ಹೇರಿದೆ. ಆ ಪಕ್ಷಗಳ ಕಾರ್ಯಕರ್ತರನ್ನು ಬಂಧಿಸಿದೆ. ಅಲ್ಲದೆ ಭಾರತ ವಿರೋಧೀ ವಿಷಕಾರುವುದರ ಜತೆಗೇ ಸಮಾಜವಾದೀ ದೇಶಗಳ ವಿರುದ್ಧ ಟೀಕೆಯೂ ನಡೆದಿದೆ.

ಜಯವರ್ಧನೆ ಸರಕಾರ ಸಾಮ್ರಾಜ್ಯಶಾಹೀ ದೇಶಗಳಿಂದ ಹಾಗೂ ಪಾಕೀಸ್ಥಾನ ಮತ್ತು ಬಾಂಗ್ಲಾದೇಶದ ಮಿಲಿಟರಿ ಸರ್ವಾಧಿಕಾರಗಳಿಂದ ಸೈನಿಕ ನೆರವು ಕೇಳಿದೆಯೆಂಬ ವರದಿಯೂ ಬಂದಿದೆ. ಇದು ಶ್ರೀಲಂಕಾಕ್ಕೆ ಮಾತ್ರವಲ್ಲ ಭಾರತಕ್ಕೂ ಬಹಳ ಅಪಾಯಕಾರಿ.

ಭಾರತವನ್ನು ವಿದ್ವೇಷಕಾರೀ ಆಡಳಿತಗಳಿಂದ ಸುತ್ತುವರಿದು ಅದು ತನ್ನ ಶಾಂತಿ, ಅಲಿಪ್ತತೆ ಹಾಗೂ ಸಾಮ್ರಾಜ್ಯಶಾಹೀ ವಿರೋಧಿಯಾದ ಪ್ರಗತಿಶೀಲ ವಿದೇಶಾಂಗ ನೀತಿಯನ್ನು ತ್ಯಜಿಸುವಂತೆ ಬೆದರಿಸುವುದು ಅಮೇರಿಕಾದ ಸಾಮ್ರಾಜ್ಯಶಾಹಿಗಳ ಧೋರಣೆಯೇ ಆಗಿದೆ ಎಂಬುದನ್ನು ಈ ಸಂಬಂಧದಲ್ಲಿ ನೆನಪಿಸಿಕೊಳ್ಳುವುದು ಅಗತ್ಯ.

ಶ್ರೀಲಂಕಾದ ದಾರುಣ ಘಟನೆಗಳ ಬಗ್ಗೆ ಭಾರತದ ಸರಕಾರ ಹಾಗೂ ಜನತೆ ಸ್ವಾಭಾವಿಕವಾಗಿಯೇ ಕಳವಳಗೊಂಡಿರುವರಾದರೂ, ಶ್ರೀಲಂಕಾ ಸರಕಾರಕ್ಕೆ ಸಮೀಪವಿರುವ ವಲಯಗಳು ಸೂಚಿಸಬಯಸುವಂತೆ ಆ ದೇಶದ ಆಂತರಿಕ ವ್ಯವಹಾರಗಳಲ್ಲಿ ಹಸ್ತಕ್ಷೇಪ ನಡೆಸುವ ಯೋಜನೆಯೇನೂ ಇಲ್ಲ.

ಶ್ರೀಲಂಕಾದಲ್ಲಿ ಹಿಂಸಾಚಾರ ಹಾಗೂ ದಮನವನ್ನು ಕೊನೆಗೊಳಿಸಿ ಮಾನವ ಹಕ್ಕುಗಳನ್ನು ಪುನಃ ಸ್ಥಾಪಿಸಬೇಕೆಂದು ನಾವು ಒತ್ತಾಯಿಸುತ್ತೇವೆ.

ಆ ದೇಶದ ಸಂಕಷ್ಟ ಪೀಡಿತ ಜನತೆಗೆ ಅಂತರಾಷ್ಟ್ರೀಯ ರೆಡ್‌ಕ್ರಾಸ್ ಮೂಲಕ ಸಾಧ್ಯವಾದ ಎಲ್ಲಾ ನೆರವು ಒದಗಿಸಲು ತಕ್ಷಣ ಕ್ರಮ ಕೈಗೊಳ್ಳಬೇಕೆಂದು ಭಾರತ ಸರಕಾರವನ್ನು ಕೇಳಿಕೊಳ್ಳುತ್ತೇವೆ. ಮಾನವ ಹಕ್ಕುಗಳ ಉಲ್ಲಂಘನೆಯ ವಿರುದ್ಧ ಹಾಗೂ ವಿದೇಶೀ ಹಸ್ತಕ್ಷೇಪದ ವಿರುದ್ಧ ಜಗತ್ತಿನಾದ್ಯಂತ ಸಾರ್ವಜನಿಕ ಅಭಿಪ್ರಾಯವನ್ನು ಕ್ರೋಢೀಕರಿಸಬೇಕೆಂದೂ ಭಾರತ ಸರಕಾರವನ್ನು ಕೇಳಿಕೊಳ್ಳುತ್ತೇವೆ.

ಶ್ರೀಲಂಕಾದ ಸಂಕಷ್ಟಪೀಡಿತ ಜನತೆಯೊಂದಿಗೆ ಸೌಹಾರ್ದ ಪ್ರದರ್ಶಿಸಲು ಹಾಗೂ ಆ ದೇಶದಲ್ಲಿ ಶೀಘ್ರವಾಗಿ ಸಾಮಾನ್ಯ ಸ್ಥಿತಿ, ಭದ್ರತೆ ಹಾಗೂ ಮಾನವ ಹಕ್ಕುಗಳು ಪುನಃ ಸ್ಥಾಪಿತಗೊಳ್ಳುವುದಕ್ಕಾಗಿ ಒಂದಾಗಬೇಕೆಂದು ಭಾರತದ ಜನತೆಗೆ ಕರೆ ನೀಡುತ್ತೇವೆ. ಈ ದೃಷ್ಟಿಯಿಂದ 1983ರ ಆಗಸ್ಟ 12ರ ಶುಕ್ರವಾರ ದೇಶಾದ್ಯಂತ ಪ್ರದರ್ಶನ ಹಾಗೂ ಸಾರ್ವಜನಿಕ ಸಭೆ ನಡೆಸಲು ಐದು ಪಕ್ಷಗಳು ನಿರ್ಧರಿಸಿವೆ."

ಸ್ವಾತಂತ್ರ್ಯ ದಿನಾಚರಣೆ

(ಒಂದನೇ ಪುಟದಿಂದ)

ಮುಚ್ಚಲ್ಪಟ್ಟು ನಿರುದ್ಯೋಗಿಗಳ ಸಂಖ್ಯೆಯನ್ನು ಉಲ್ಬಣಗೊಳಿಸಿದೆ. ಬೆಲೆ ಹೆಚ್ಚಳಕ್ಕೆ ಸರಿಯಾಗಿ ಸಂಬಳ, ತುಟ್ಟಿಭತ್ಯ ಜಾಸ್ತಿಯಾಗಬೇಕೆಂದು ಕಾರ್ಮಿಕರು ಹೋರಾಟ ಮಾಡುತ್ತಿರುವಾಗ, ಕಾರ್ಖಾನೆ ಮಾಲಕರು ಬಿಕ್ಕಟ್ಟಿನ ಹೆಸರಲ್ಲಿ ಕಾರ್ಖಾನೆಗಳನ್ನು ಮುಚ್ಚುವ ಕ್ರಮ ಕೈಗೊಳ್ಳುತ್ತಿದ್ದಾರೆ. ಕಾರ್ಮಿಕರಲ್ಲಿ ಅಸಮಾಧಾನ ತೀವ್ರಗೊಂಡು ದೀರ್ಘಕಾಲದ ಮುಷ್ಕರಗಳು ನಡೆಯುತ್ತಿವೆ.

ಅಮೇರಿಕನ್ ಸಾಮ್ರಾಜ್ಯಶಾಹಿಯ ಯುದ್ಧ ಖೋರ ನೀತಿಯ ವಿರುದ್ಧ ಎಲ್ಲ ದೇಶಗಳಲ್ಲೂ ಹಾಗೆಯೇ ಭಾರತದಲ್ಲೂ ಜನತೆ ತೀವ್ರ ಆತಂಕ ವ್ಯಕ್ತ ಮಾಡಿ ಜಗತ್ತಿನಲ್ಲಿ ಶಾಂತಿ ನೆಲಸಬೇಕೆಂದು ಹೋರಾಟ ನಡೆಸುತ್ತಿರುವಾಗ, ರೈತ, ಕಾರ್ಮಿಕರು, ವಿದ್ಯಾರ್ಥಿ ಯುವಜನತೆ ತಂತಮ್ಮ ಬೇಡಿಕೆಗಳ ಸಲುವಾಗಿ ದೀರ್ಘ ಚಳವಳಿ ನಡೆಸುತ್ತಿರುವಾಗ, ರಾಜ್ಯಗಳು ಹೆಚ್ಚಿನ ಅಧಿಕಾರ, ಹಣಕಾಸಿಗಾಗಿ ಕೇಂದ್ರದೊಡನೆ ಕೂಗೆಬ್ಬಿಸುತ್ತಿರುವಾಗ, ಛಿದ್ರಕಾರಿ, ಜಾತೀಯ ಶಕ್ತಿಗಳ ವಿರುದ್ಧ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಾರ್ಟಿ ಮತ್ತು ಇತರ ಪ್ರಜಾಪ್ರಭುತ್ವ ಶಕ್ತಿಗಳೆಲ್ಲ ಒಂದಾಗಿ ಪ್ರತಿಭಟನೆ ವ್ಯಕ್ತಮಾಡುತ್ತಿರುವಾಗ ಸ್ವಾತಂತ್ರ್ಯ ದಿನಾಚರಣೆ ಆಚರಿಸಲಾಗುತ್ತಿದೆ.

ಇಂದಿರಾ ಗಾಂಧಿಯ ಸರ್ವಾಧಿಕಾರದ, ಆರ್ಥಿಕ ನೀತಿಯ ಗುತ್ತೆದಾರಿ ಬಂಡವಲದಾರರಿಗೆ ಪ್ರೋತ್ಸಾಹ ನೀಡುವ ಧೋರಣೆಯ, ರೈತ-ಕಾರ್ಮಿಕರ ಮೂಲಭೂತ ಹಕ್ಕುಗಳಿಗೆ ಗಧಾ ಪ್ರಹಾರ ಮಾಡುವ ಕ್ರಮದ ಛಿದ್ರಕಾರಿ ಶಕ್ತಿಗಳನ್ನು ದಮನಿಸುವುದಕ್ಕೆ ತೋರುವ ಅಸಮರ್ಥತೆಯ ವಿರುದ್ಧ ನಮ್ಮ ಹೋರಾಟಗಳನ್ನು ಮುಂದುವರಿಸುವ ಪ್ರತಿಜ್ಞೆ ಮಾಡಬೇಕಾಗಿದೆ.

ಜಗತ್ತಿನಲ್ಲಿ ಶಾಂತಿ ನೆಲಸಲಿ, ಛಿದ್ರಕಾರಿ ಶಕ್ತಿಗಳು ನಾಶವಾಗಲಿ, ಜಾತೀಯ, ಮತೀಯ ಸೌಹಾರ್ದತೆ ಕಾಪಾಡಲ್ಪಡಲಿ, ರೈತ-ಕಾರ್ಮಿಕರ ಐಕ್ಯ ಹೋರಾಟ ಮುಂದುವರಿಯಲಿ.

ಕಾಂಗ್ರೆಸ್ಸಿಗೆ ಪರ್ಯಾಯವಾಗಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಾರ್ಟಿಯ ಮುಖಂಡತ್ವದಲ್ಲಿ ಎಡ ಮತ್ತು ಪ್ರಜಾಪ್ರಭುತ್ವ ರಂಗ ಬೆಳೆದುಬರಬೇಕು. ದೇಶದ ಸಾರ್ವಭೌಮತ್ವದ ಉಳಿಗೆಗಾಗಿ, ಪ್ರಜಾಪ್ರಭುತ್ವ ಹಕ್ಕುಗಳ ರಕ್ಷಣೆಗಾಗಿ, ದೇಶ ಸ್ವಾವಲಂಬಿಯಾಗುವ ಸಲುವಾಗಿ ಎಡ ಮತ್ತು ಪ್ರಜಾಪ್ರಭುತ್ವ ರಂಗ ಬಲಿಷ್ಟಗೊಳ್ಳಬೇಕು. ಹಿಂದಿನ ವರ್ಷ ಸಿ.ಪಿ.ಐ.(ಎಂ) ಪಕ್ಷದ ಉತ್ತೇಜನದಿಂದಾಗಿ ಹಲವಾರು ಐಕ್ಯ ಹೋರಾಟಗಳು ನಡೆದಿವೆ. ಅಂಥ ಹೋರಾಟಗಳನ್ನು ಮುಂದುವರಿಸೋಣ, ರೈತ-ಕಾರ್ಮಿಕರ, ಸಾರ್ವಜನಿಕರ ಹಿತಸಾಧಿಸೋಣ.

ಕರ್ನಾಟಕದಲ್ಲಿ ಕಾಂಗ್ರೆಸ್ ಸರಕಾರ ಹೋಗಿ ಜನತಾ ಪಕ್ಷದ ಸರ್ಕಾರ ಅಧಿಕಾರಕ್ಕೆ ಬಂದಿದೆ. ಆದರೆ ಭ್ರಷ್ಟಾಚಾರ, ಸ್ವಜನ ಪಕ್ಷಪಾತ, ಕಾರ್ಮಿಕ, ರೈತರ ಮೇಲೆ ದಬ್ಬಾಳಿಕೆಗಳು ಮುಂದುವರಿದಿವೆ. ಇವುಗಳ ವಿರುದ್ಧ ಕೂಡ ಹೋರಾಟ ಮುಂದುವರಿಯಬೇಕು. ಕರ್ನಾಟಕದಲ್ಲಿ ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳು ಬೆಳೆದು ಬಲಿಷ್ಟಗೊಳ್ಳಬೇಕು. ಈ ದಿಸೆಯಲ್ಲಿ ನಾವೆಲ್ಲರೂ ದುಡಿಯಲು ಪಣತೊಡೋಣ.

Printed & Published by P. Ramachandra Rao by him on behalf of the Communist Party of India (Marxist) Karnataka State Committee V. Temple Street Sultanpet, Bangalore 560053. Editorial and managerial office : L-56, K. V. Temple Street, Sultanpet, B-53. Phone : 24154. Printed at Karnataka Pressmen Associates (P) Limited, 54/1, K. R. Road, Bangalore-4 Editor: P. RAMACHANDRA RAO.